ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೩ ಅಕ್ಟೋಬರ್ ೨೦೦೨ ಸಂಚಿಕೆ ೩

ಕಾವೇರಿಯಿಂದ ಕಾಶ್ಮೀರ್‌ವರೆಗಿನ ಸಮಸ್ಯೆಗಳಿಗೆಲ್ಲ ಹಿಂಸಾ ಮಾರ್ಗವೊಂದೆ ಉಪಾಯವೇ?

★

ಭಾರತದ ಅಧಿಕ ಜನಸಂಖ್ಯೆ ಮತ್ತು ಆಹಾರದ ಕೊರತೆ
ಒಂದು ಲಘು ಟಿಪ್ಪಣಿ

★

೧೯೪೨ರಲ್ಲಿ ಕ್ವಿಟ್ ಇಂಡಿಯಾ,
೧೯೭೪ರಲ್ಲಿ ಸಂಪೂರ್ಣಕ್ರಾಂತಿ!

★

ಸಂಸದರಿಗೆ ಕೋಟಿ ರೂಪಾಯಿ ರಾಜ್ಯಾಂಗಕ್ಕೆ ಅಪಚಾರ!

★

ಗಾಂಧೀ, ನೆಹರು, ಜೆ.ಪಿ. ಮತ್ತು ವಿನೋಬಾ

★

★ ಈ ಸಂಚಿಕೆಯಲ್ಲಿ ★

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೩ ಸಂಚಿಕೆ : ೩

ಅಕ್ಟೋಬರ್ ೨೦೦೨

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

....

ಚಂದಾ ವಿವರ :

ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ : ರೂ. ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :

ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧
ದೂರವಾಣಿ :
೦೮೨೩-೬೪೮೭೫೪

ಕಪ್ಪು
ಒಂದು ಕಾಲಕ್ಕೆ ಅನೀತಿಗೆ ಸಂಕೇತ
ಕಾಳರಾತ್ರಿಗೆ ಪ್ರತಿಧ್ವನಿ
ಕಪ್ಪೆಂದರೆ ಪಾಪ
ಕಪ್ಪೆಂದರೆ ನರಕ
ಇವೆಲ್ಲ ತುಕ್ಕು ಹಿಡಿದ
ಸವಕಲು ಪದಗಳು

ಇಂದು ಕಪ್ಪೆಂದರೆ
ಚೈತನ್ಯ
ಬಾಳಿಗಾಗಿ ಹೋರಾಟ
ಮಾನವತೆಯ ಪ್ರತಿರೂಪ
ನಾಳೆಯ ನಿಘಂಟುಗಳಲ್ಲಿ
ಕಪ್ಪೆಂದರೆ
ಕ್ರಾಂತಿಗೊಂದು ಪರ್ಯಾಯ

ಅದಕ್ಕೇ ಇದ್ದೀತು
ಇಂದಿನ ಸೂರ್ಯ
ಬಂಧಿಯಾಗಿರುವ
ಆಫ್ರಿಕನ್ನರ ಕಪ್ಪು ಸೂರ್ಯ
ಮಾಂಡೇಲನ ಕಂಡು
ಸ್ಫೂರ್ತಿಗೊಳ್ಳುತ್ತಿದ್ದಾನೆ
ನಾಳೆಯ ಸೂರ್ಯ
ಬಿಳಿಯರ ಅಹಂಕಾರಕ್ಕೆ ರೋಸಿ
ರೊಚ್ಚಿನಿಂದ
ಕಪ್ಪಾಗಿ ಹುಟ್ಟಿ ಬಂದರೂ
ಆಶ್ಚರ್ಯವಿಲ್ಲ.

ವಿಚಾರ ದೀಪ್ತಿ....................

ಗಾಂಧೀಪಂಥ ಎಂಬುದೊಂದಿಲ್ಲ. ನನ್ನ ತರುವಾಯ ಯಾವ ಪಂಥವನ್ನೂ ಕಟ್ಟಿಹೋಗುವ ಇಚ್ಛೆ ನನಗಿಲ್ಲ. ನಾನು ಯಾವುದಾದರೂ ನೂತನ ತತ್ವದ ಅಥವಾ ಸಿದ್ಧಾಂತದ ಮೂಲಪುರುಷನೆಂಬ ಭಾವನೆ ನನಗಿಲ್ಲ. ನಿತ್ಯ ಸತ್ಯಗಳನ್ನು ನಮ್ಮ ದೈನಂದಿನ ಜೀವನ ಹಾಗೂ ಸಮಸ್ಯೆಗಳಿಗೆ ಅಳವಡಿಸಲು ನನ್ನ ರೀತಿಯಲ್ಲಿ ನಾನು ಸಾಧಾರಣನಂತೆ ಪ್ರಯತ್ನಿಸಿದ್ದೇನೆ: ಅಷ್ಟೆ. ಸತ್ಯ – ಅಹಿಂಸೆ ಈ ಭಾವಗಳು ಪರ್ವತಗಳಷ್ಟೇ ಪುರಾತನವಾದುವು. ನನ್ನ ಶಕ್ತಿಗೆ ಸಾಧ್ಯವಾದಷ್ಟು ವಿಪುಲ ಪ್ರಮಾಣದಲ್ಲಿ ಅವೆರಡರಲ್ಲೂ ಪ್ರಯೋಗಗಳನ್ನು ನಡೆಸಿರುವುದಷ್ಟೆ ನನ್ನ ಕೆಲಸ. ಹಾಗೆ ಮಾಡುವಾಗ ಕೆಲವು ಸಲ ತಪ್ಪು ಮಾಡಿದ್ದೇನೆ: ಆ ತಪ್ಪುಗಳಿಂದ ಪಾಠ ಕಲಿತಿದ್ದೇನೆ. ಹೀಗೆ ಜೀವನ ಮತ್ತು ಅದರ ಸಮಸ್ಯೆಗಳು ಸತ್ಯ ಅಹಿಂಸೆಗಳ ಅನುಷ್ಠಾನಗಳಲ್ಲಿ ನಡೆಸಿರುವ ಅನೇಕ ಪ್ರಯೋಗಗಳಾಗಿವೆ.

ನಿಮ್ಮ ಮುಂದೆ ಉದ್ಭವಿಸಿರುವ ಸಮಸ್ಯೆಗಳನ್ನು ನನ್ನ ಹೇಳಿಕೆಗೆ ಅನುಸಾರವಾಗಿ ಎದುರಿಸಬೇಕೆಂಬುದೇ ನನ್ನ ಇಚ್ಛೆ. ಹೀಗೆ ಸತ್ಯ ಅಹಿಂಸೆಗಳಲ್ಲಿ ನನ್ನ ಶ್ರದ್ಧೆ ವರ್ಧಿಸುತ್ತಲೇ ಇದೆ. ನನ್ನ ಜೀವನದಲ್ಲಿ ಅವುಗಳನ್ನು ಅನುಸರಿಸುತ್ತ ಹೋದಂತೆ ನಾನು ಕೂಡ ಪ್ರತಿಕ್ಷಣವೂ ಬೆಳೆಯುತ್ತಲೇ ಇದ್ದೇನೆ. ಅವುಗಳಲ್ಲಿ ನನಗೆ ಹೊಸ ಅರ್ಥ ಸ್ಫುರಿಸುತ್ತಿದೆ. ದಿನದಿನವೂ ಅವುಗಳನ್ನು ಹೊಸ ಹೊಸ ಬೆಳಕಿನಲ್ಲಿ ಕಂಡು ಹೊಸ ಹೊಸ ಅರ್ಥಗಳನ್ನೂ ಅರಿಯುತ್ತಿದ್ದೇನೆ. ನನ್ನ ಜತೆಜತೆಗೆ ನೀವೂ ಕೂಡ ಬೆಳೆಯಬೇಕು. ನನ್ನ ಅನಂತರ ಏನಾಗುತ್ತದೆ ಎಂಬುದನ್ನು ತಿಳಿಯುವ ಚಿಂತೆ ನನಗಿರಕೂಡದು. ಆದುದರಿಂದ ನನ್ನನ್ನು ಮರೆತು ಬಿಡಿ. ನೀವು ಭದ್ರವಾಗಿ ಅಂಟಿಕೊಳ್ಳಬೇಕಾದುದು ನನ್ನ ಹೆಸರಿಗಲ್ಲ, ತತ್ವಗಳಿಗೆ. ಅದರ ಅಳತೆಗೋಲಿನಿಂದ ನಿಮ್ಮ ಒಂದೊಂದು ಚಟುವಟಿಕೆಯನ್ನೂ ಅಳೆದು, ಉದ್ಭವಿಸಬಹುದಾದ ಎಲ್ಲ ಸಮಸ್ಯೆಗಳನ್ನೂ ನಿರ್ಭೀತರಾಗಿ ಎದುರಿಸಿ.

– **ಗಾಂಧೀ**

ಕಾವೇರಿಯಿಂದ ಕಾಶ್ಮೀರ್‌ವರೆಗಿನ ಸಮಸ್ಯೆಗಳಿಗೆಲ್ಲ ಹಿಂಸಾ ಮಾರ್ಗವೊಂದೆ ಉಪಾಯವೇ?

ಲೇ : ಸುರೇಂದ್ರ ಕೌಲಗಿ

ಸಮಸ್ಯೆಗಳ ಪರಿಹಾರಕ್ಕೂ ಹಿಂಸಾಮಯ ಉಪಾಯಕ್ಕೂ ನಂಟು ಉಂಟಾಗಿರುವುದು ಮಾನವಕುಲ ಇತಿಹಾಸದಲ್ಲಿ ಕಪ್ಪುಬರಹದ ಅಧ್ಯಾಯವಾಗಿದೆ. ತನ್ನ ಜ್ಞಾನ-ವಿಜ್ಞಾನಗಳ ಬಲದಿಂದ ಸುಸಂಸ್ಕೃತವಾಗಬೇಕಿದ್ದ ಮಾನವಕುಲ ಇಂದು ೨೧ ನೇ ಶತಮಾನದಲ್ಲಿ ರಾಕ್ಷಸೀ ಪ್ರವೃತ್ತಿಯನ್ನು ತೋರಿಸುತ್ತಿರುವುದು, ಅನಾಗರಿಕತೆಯತ್ತ ಹೋಗುತ್ತಿರುವುದು ಅತ್ಯಂತ ದುಃಖದ ಸಂಗತಿ. ಮಾನವನ ಏಳಿಗೆಗೆ, ಉದ್ಧಾರಕ್ಕೆ ಸಹಾಯಕವಾಗುವಂಥ ವಸ್ತು, ವಿಚಾರಶಕ್ತಿ, ವಿವೇಚನಾ ಶಕ್ತಿ, ಉಚಿತ-ಅನುಚಿತಗಳ ಸೂಕ್ಷ್ಮತೆಯನ್ನು ತಿಳಿದುಕೊಳ್ಳಬೇಕಾದ ಸಂವೇದನಾ ಶೀಲತೆ. ಈ ಎಲ್ಲ ಮೂಲಭೂತ ಗುಣಗಳನ್ನು ಇಂದಿನ ಮನುಷ್ಯ ಕಳೆದುಕೊಂಡಿದ್ದಾನೆ. ಈಗ ಅವನ ಆಲೋಚನಾ ರೀತಿ ತಪ್ಪುದಾರಿ ಹಿಡಿದಿದೆ; ಹಿಂಸೆಯನ್ನು ಪೂಜಿಸತೊಡಗಿದ್ದಾನೆ. ಹಿಂಸೆಯೊಂದಿದ್ದರೆ ಸಮಸ್ಯೆಯನ್ನು ಪರಿಹರಿಸಬಹುದೆಂಬ ನಂಬಿಕೆಯನ್ನು ಬೆಳೆಸಿಕೊಂಡಿದ್ದಾನೆ. ತಾನೇ ರೂಪಿಸಿಕೊಂಡ ಕಾನೂನು ಕಟ್ಟಳೆಗಳನ್ನು, ನಿಯಮಗಳನ್ನು, ನ್ಯಾಯಾಲಯಗಳನ್ನು, ಸಂವಿಧಾನವನ್ನು ಅಪಮೌಲ್ಯಗೊಳಿಸಿದ್ದಾನೆ. ಹಾಗಾಗಿ ಸಮಸ್ಯೆಯ ಪರಿಹಾರಕ್ಕೆ ಅವನಿಗೆ ಪರ್ಯಾಯವಾಗಿ ಹಿಂಸೆಯಲ್ಲದೆ ಬೇರೆ ಉಪಾಯ ಕಾಣುತ್ತಿಲ್ಲ.

ಉದಾಹರಣೆಗೆ ಕಾವೇರಿ ನೀರಿನ ಹಂಚಿಕೆಯ ಸಮಸ್ಯೆಯನ್ನೇ ತೆಗೆದುಕೊಳ್ಳೋಣ. ಈ ಸಮಸ್ಯೆ ನಿನ್ನೆ-ಮೊನ್ನೆಯದಲ್ಲ. ಭಾರತಕ್ಕೆ ಸ್ವಾತಂತ್ರ್ಯ ಬರುವ ಮೊದಲಿನಿಂದಲೂ ಇರುವಂಥದು, ಸ್ವಾತಂತ್ರ್ಯ ಬಂತು, ಗಣರಾಜ್ಯವಾಯಿತು, ಸಂವಿಧಾನ ಜಾರಿಗೆ ಬಂತು. ಈ ಯಾವ ಒಳ್ಳೆಯ ಬೆಳವಣಿಗೆಗಳೂ ಕಾವೇರಿ ಸಮಸ್ಯೆಯನ್ನು ಬಗೆಹರಿಸಲು ಸಹಾಯಕವಾಗಲಿಲ್ಲವಷ್ಟೇ ಅಲ್ಲ; ವರ್ಷಗಳುರುಳಿದಂತೆ ಸಮಸ್ಯೆ ಕ್ಲಿಷ್ಟವಾಗುತ್ತ ಬಂತು. ಕಗ್ಗಟ್ಟಾಗುತ್ತ ಬಂತು. ಅದರೊಂದಿಗೆ ವಿವಾದಕ್ಕೆ ಸಂಬಂಧಿಸಿದ ಎರಡೂ ರಾಜ್ಯಗಳ ಜನರು ತಮ್ಮ ವಿವೇಚನಾ ಶಕ್ತಿಯನ್ನೂ ಕಳೆದುಕೊಳ್ಳುತ್ತಾ ಬಂದರು; ಕಣ್ಣಿಗೆ ಅಜ್ಞಾನದ ಪಟ್ಟಿಯನ್ನು ಕಟ್ಟಿಕೊಂಡರು. ಕಾವೇರಿ ಸಮಸ್ಯೆ ಮೂಲಭೂತವಾಗಿ ಸೃಷ್ಟಿಯಾಗಿರುವುದು ಪ್ರಕೃತಿಯಿಂದಲೋ ಅಥವಾ ಮಾನವನಿಂದಲೋ ಎಂಬುದನ್ನು ತಿಳಿದುಕೊಳ್ಳುವಷ್ಟು ಪ್ರಯತ್ನವನ್ನೂ ಮಾಡದ ಅಜ್ಞಾನಿಯಾದ. ಪ್ರಕೃತಿಯ ಕೂಸಾದ ಮನುಷ್ಯನಿಗೆ ಪ್ರಕೃತಿಯ ಒಲವು-ಮುನಿಸಿಕೆಗಳು ಪರಿಚಯವಿಲ್ಲದೆ ಇಲ್ಲ. ಪ್ರಕೃತಿ ವಿಕೋಪಗೊಂಡರೆ ಮಾನವನ ಯಾವ ಆಟವೂ ನಡೆಯುವದಿಲ್ಲವೆಂಬುದು

ಚೆನ್ನಾಗಿಗೊತ್ತಿದೆ. ಹೀಗಿದ್ದೂ ಕಾವೇರಿ ಸಮಸ್ಯೆಯ ಪರಿಹಾರಕ್ಕೆ ತನ್ನ ವಿವೇಚನಾ ಶಕ್ತಿಯನ್ನು ಉಪಯೋಗಿಸಿಕೊಳ್ಳದೆ ಹಿಂಸಾಮಾರ್ಗದ ಉಪಾಯವನ್ನು ಮೊರೆ ಹೊಕ್ಕಿರುವುದು ಅವನ ಬುದ್ಧಿಶಕ್ತಿಯ ಅವನತಿಯನ್ನು ತೋರಿಸುತ್ತದೆ; ಅವನ ನಾಯಕರ ದಡ್ಡತನದ ಪರಮಾವಧಿಯನ್ನು ತೋರಿಸುತ್ತದೆ. ನೀರು, ಗಾಳಿ, ಭೂಮಿ ಮತ್ತು ಇತರ ಎಲ್ಲ ಸಕಲ ಸಾಧನ ಸಂಪತ್ತುಗಳೆಲ್ಲವೂ ಮನುಷ್ಯನ ಬದುಕಿಗೆ ಅನಿವಾರ್ಯ, ಅಗತ್ಯ, ಅವಶ್ಯ, ಹಾಗೆಂದು ಪರಸ್ಪರ ಹೊಡೆದಾಡಿದರೆ, ಆತ್ಮಾ ಹುತಿ ಮಾಡಿಕೊಂಡರೆ, ಬೆಂಕಿ ಹಚ್ಚಿದರೆ, ಹಿಂಸಾಚಾರ ಮಾಡಿದರೆ. ರಾಜಕಾರಣ ಮಾಡಿದರೆ ಸಮಸ್ಯೆ ಬಗೆಹರಿಯಲು ಸಾಧ್ಯವೇ. ಕೋಳಿ ಒಂದು ದಿನ ಮಾತ್ರ ಮೊಟ್ಟೆ ಕೊಡಲಿಲ್ಲವೆಂಬ ಕಾರಣಕ್ಕಾಗಿ ದಿನನಿತ್ಯ ಚಿನ್ನದ ಮೊಟ್ಟೆ ಕೊಡುತ್ತಿದ್ದ ಕೋಳಿಯನ್ನು ಸಾಯಿಸಲಾದೀತೆ? ಮನುಷ್ಯ ಮಾಡಿದ ತಪ್ಪನ್ನು ತಿದ್ದಲು ಹಲವಾರು ಸೂಕ್ತ ಮಾರ್ಗಗಳಿವೆ. ಆದರೆ ಪ್ರಕೃತಿಯ ತಪ್ಪಿನಿಂದಾಗಿ ಆದ ಸಮಸ್ಯೆಗಳಿಗೆ ಯಾರು ಹೊಣೆ ಮತ್ತು ಅದಕ್ಕೆ ಪರಿಹಾರವೇನು ಎಂಬುದನ್ನು ಕುರಿತು ಶಾಂತವಾಗಿ ಆಲೋಚಿಸುವ ಪ್ರಯತ್ನ ಮಾಡಬೇಡವೆ?

ಕಾಶ್ಮೀರದಂಥ ಸಮಸ್ಯೆಗಳು ವಿಶ್ವದಲ್ಲಿ ಅನೇಕ ಇವೆ. ಅವೆಲ್ಲವೂ ಮಾನವ ನಿರ್ಮಿತ. ಆ ಸಮಸ್ಯೆಗಳೆಲ್ಲ ಉಂಟಾಗಲು ಮನುಷ್ಯನ ವಿಚಾರ ಶೂನ್ಯತೆ. ಆದ್ದರಿಂದ ಅವುಗಳ ಪರಿಹಾರವೂ ವಿಚಾರಶೀಲತೆಯಿಂದ ಮಾತ್ರವೇ. ಬಾಂಬ್‌ಗಳಿಂದ ಅಲ್ಲ. ಕಾಶ್ಮೀರದಂಥ, ತಮಿಳು ಈಲಂನಂಥ, ಪಾಲೆಸ್ಟೈನಿನಂಥ ಹಾಗೂ ಇತರ ಸಮಸ್ಯೆಗಳ ಪರಿಹಾರಕ್ಕಾಗಿ ೧೯೪೫ ರಲ್ಲಿ ವಿಶ್ವರಾಷ್ಟ್ರ ಸಂಸ್ಥೆಯ ಸ್ಥಾಪನೆಯಾಯಿತು. ಯುದ್ಧಗಳನ್ನು ಮಾಡದೆಯೆ ಸಮಸ್ಯೆಗಳನ್ನು ಪರಿಹರಿಸು ವುದು ಹೇಗೆಂದು ವಿಚಾರಮಾಡುವುದಕ್ಕಾಗಿಯೇ ವಿಶ್ವರಾಷ್ಟ್ರ ಸಂಸ್ಥೆಯ ಸ್ಥಾಪನೆ ಯಾಯಿತು. ಆದರೆ ಆದದ್ದೇನು? ಮನುಷ್ಯನ ಹಿಂಸಾಶಕ್ತಿಯ ಪೂಜೆ ವಿಶ್ವ ರಾಷ್ಟ್ರ ಸಂಸ್ಥೆಯನ್ನು ಮೂಲೆಗುಂಪಾಗಿಸಿತು, ಮಾನವನ ವಿಚಾರಶಕ್ತಿಯನ್ನು ಪಾಶವೀಶಕ್ತಿ ಸೋಲಿಸಿತು. ಸಮಸ್ಯೆಗಳ ಪರಿಹಾರಕ್ಕೆ ವಿಶ್ವರಾಷ್ಟ್ರ ಸಂಸ್ಥೆ ಇರು ವಾಗ ಕಲಹವೇಕೆ, ಕದನವೇಕೆ? ನಿಜವಾಗಿಯೂ ಆಗಬೇಕಿರುವುದು ವಿಶ್ವರಾಷ್ಟ್ರ ಸಂಸ್ಥೆಯನ್ನು ಬಲಿಷ್ಠಗೊಳಿಸಿ ಹಿಂಸಾಮಾರ್ಗವನ್ನು ತ್ಯಜಿಸುವುದು. ಆದರೆ ಹಿಂಸಾಮಾರ್ಗವೇ ಬಲಿಷ್ಠಗೊಳ್ಳುತ್ತಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನಗಳು ಹಿಂಸಾಚಾರ ಬೆಳೆಯಲು ಕುಮ್ಮಕ್ಕು ನೀಡಿವೆ. ಹಿಂಸೆ ಬೆಳೆಯಲು ಸಾಧನ ಗಳಾಗಿವೆ.

ಕಾವೇರಿಯ ಸಮಸ್ಯೆಯೇ ಇರಬಹುದು, ಕಾಶ್ಮೀರ ಸಮಸ್ಯೆಯೇ ಇರ ಬಹುದು. ಇಲ್ಲಿ ಮೂಲಭೂತವಾಗಿ ನಾವು ಯೋಚನೆ ಮಾಡಬೇಕಾಗಿರುವುದು ಸಮಸ್ಯೆಯ ಪರಿಹಾರಕ್ಕೆ ತಕ್ಕುದಾದ ಮಾರ್ಗವನ್ನು ಅಥವಾ ಸಾಧನವನ್ನು

ನಾವು ಉಪಯೋಗಿಸಿಕೊಳ್ಳುತ್ತಿದ್ದೇವೆಯೇ ಎಂಬುದು. ಕಾವೇರಿ ನೀರಿನ ಸಮಸ್ಯೆ ಪ್ರಾಥಮಿಕವಾಗಿ ನೈಸರ್ಗಿಕ ಸಮಸ್ಯೆ. ಆದರೆ ಈ ಸಮಸ್ಯೆಯ ಪರಿಹಾರಕ್ಕಾಗಿ ನಾವು ಉಪಯೋಗಿಸುತ್ತಿರುವ ಮಾರ್ಗ ರಾಜಕಾರಣದ ಮಾರ್ಗ. ಆದ್ದರಿಂದ ವರ್ಷಗಳೆಷ್ಟೋ ಕಳೆದರೂ ಕಾವೇರಿ ಸಮಸ್ಯೆಗೆ ಬೇಕಾದ ಪರಿಹಾರ ದಾರಿತಪ್ಪಿ ರಾಜಕಾರಣದ ಗೋಂಡಾರಣ್ಯದಲ್ಲಿ ಅಲೆಯುತ್ತಿದೆ. ಇದಕ್ಕೆ ಬದಲಾಗಿ ನಿಸರ್ಗದ ರಕ್ಷಣೆಯ ಬಗ್ಗೆ, ನೀರಿನ ಸದ್ಬಳಕೆಯ ಬಗ್ಗೆ, ನೀರಿನ ಮಿತವ್ಯಯದ ಬಗ್ಗೆ ಯೋಚನೆ ಮಾಡಿದ್ದರೆ, ಯೋಜನೆ ಹೂಂಡಿದ್ದರೆ ಇಂದು ಕಾವೇರಿ ಬರಡಾಗಿರುತ್ತಿರಲಿಲ್ಲ, ಒಡಲು ತುಂಬಿ ಹರಿಯುತ್ತಿತ್ತು.

ಕಾವೇರಿಯ ನದಿ ನೀರಿನ ಫಲಾನುಭವಿಗಳಾದ ಕರ್ನಾಟಕ ಮತ್ತು ತಮಿಳು ನಾಡಿನ ರೈತರಲ್ಲಿ ಮೈತ್ರಿ ಭಾವವನ್ನು ಬೆಳೆಸಲಿಲ್ಲ: ಸಹಕಾರದ ಚಿಂತನೆಯನ್ನು ಹೊತ್ತಿಸಲಿಲ್ಲ. ಬದಲಿಗೆ ಅವರಿಬ್ಬರನ್ನು ಕಟ್ಟಾ ವೈರಿಗಳನ್ನಾಗಿ ಮಾಡಿದೆವು. ಎಲ್ಲಿ ಹೋದವು ನಮ್ಮ ಆ ಸಾಕ್ಷರತಾ ಪ್ರಚಾರ ಆಂದೋಲನ, ವಯಸ್ಕರ ಶಿಕ್ಷಣ ಯೋಜನೆ, ಮಾಧ್ಯಮಗಳ ಮೇಲಾಟ, ಉಪಗ್ರಹಗಳ ಹಾರಾಟ, ಮಾಹಿತಿ ತಂತ್ರಜ್ಞಾನದ ಮೋಡಿ. ಈ ಎಲ್ಲ ವಿಷಯಗಳಿಗಾಗಿ ಖರ್ಚಾದ ಹಣ ಕೋಟಿ-ಕೋಟಿ-ಕೋಟಿ ರೂಪಾಯಿ ಆದರೂ ಇಂದು ಕಾವೇರಿ ಖಾಲಿ ಖಾಲಿ. ಇನ್ನು ಕಾಶ್ಮೀರ! ನೆನೆದರೆ ಎದೆ ಝಲ್ಲೆನ್ನುತ್ತದೆ. ಅಲ್ಲಿ ಐವತ್ತು ವರ್ಷಗಳಿಂದಲೂ ರಕ್ತದ ಹೊಳೆ ಹರಿಯುತ್ತಿದೆ. ಆದರೂ ಅದರ ವಿವಾದದಲ್ಲಿ ತೊಡಗಿರುವವರ ಹೃದಯ ಕರಗಿಲ್ಲ. ಇಲ್ಲಿಯೂ ಸಹ, ಸಮಸ್ಯೆಗಳ ಪರಿಹಾರಕ್ಕೆ ತಕ್ಕದಾದ ಮಾರ್ಗವನ್ನು ಭಾರತವಾಗಲೀ, ಪಾಕಿಸ್ಥಾನವಾಗಲೀ ಅನುಸರಿಸಲು ಪ್ರಯತ್ನಿಸಿಲ್ಲ. ಗುರಿ ಒಂದಾದರೆ ಅದನ್ನು ಪಡೆಯುವ ಸಾಧನ ಬೇರೆಯಾಗಿದೆ. ಎರಡೂ ರಾಷ್ಟ್ರಗಳೂ ಇತಿಹಾಸವನ್ನು ಮರೆಮಾಚುತ್ತಿವೆ: ವಸ್ತುಸ್ಥಿತಿಯನ್ನು ಒಪ್ಪಲು ಹಿಂಜರಿಯುತ್ತಿವೆ. ಅಲ್ಲಿಯ ಸತ್ಯಸಂಗತಿಗಳ ಮೇಲೆ ತಮ್ಮ ದೇಶದೊಳಗಿನ ರಾಜಕೀಯ ಅನಿವಾರ್ಯತೆಯ ಮುಸುಕನ್ನು ಹಾಕಿ ಮರೆಮಾಡಿಕೊಂಡಿವೆ. ಆದರಿಂದಾಗಿ ಕಾಶ್ಮೀರ ಸಮಸ್ಯೆಗೆ ಐವತ್ತು ವರ್ಷಗಳಾದರೂ ಉತ್ತರ ದೊರೆಯುತ್ತಿಲ್ಲವಷ್ಟೇ ಅಲ್ಲ ವಿಶ್ವಮಹಾಯುದ್ಧವಾಗುವಷ್ಟರ ಮಟ್ಟಿಗೆ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ.

ಹೀಗೆ ದೇಶದ ಯಾವುದೇ ಸಮಸ್ಯೆ ಇರಲಿ ಅದರ ಪರಿಹಾರಕ್ಕೆ ಹಿಂಸೆಯನ್ನು ಅವಲಂಬಿಸುವ ಮನೋಭಾವ ಏಕೆ ಮೂಡುತ್ತದೆ ಎಂಬುವುದು ಒಂದು ಮೂಲಭೂತವಾದ ಪ್ರಶ್ನೆ. ಬಡತನ, ನಿರುದ್ಯೋಗ ಹತಾಶೆ, ನಿರಾಶೆ, ವಿಳಂಬ ಮಹತ್ವಾಕಾಂಕ್ಷೆ ಇತ್ಯಾದಿಗಳುಹಿಂಸೆಯ ಉಗಮಕ್ಕೆ ಕಾರಣ.

ಆದ್ದರಿಂದ ಯಾವುದೇ ಒಂದು ಸಮಸ್ಯೆ ತಲೆದೋರಿದರೆ ಅದು ಗಂಭೀರ ಸ್ವರೂಪ ತಾಳುವ ಮೊದಲೆ ದೇಶದ ಕಾನೂನುಗಳು, ಕಾನೂನನ್ನು ಜಾರಿ

ತರುವಂಥವರು ಮತ್ತು ನಾಯಕರು ವಿಳಂಬ ಮಾಡದೆ ಸಮಸ್ಯೆಯ ಪರಿಹಾರಕ್ಕಾಗಿ ತೊಡಗಬೇಕು. ಆದರೆ ಈಗ ಹಾಗಾಗುತ್ತಿಲ್ಲ. ಸಮಸ್ಯೆ ಕಗ್ಗಂಟಾದ ಮೇಲೆ ಅದನ್ನು ಬಿಡಿಸುವ ಜವಾಬ್ದಾರಿಯನ್ನು ಜನರೇ ನೇರವಾಗಿ ಕೈಗೆತ್ತಿಕೊಳ್ಳುತ್ತಾರೆ. ಆಗ ಅವರಿಗೆ ತಕ್ಷಣ ಗೋಚರಿಸುವ ಮತ್ತು ಸುಲಭವಾಗಿ ಜಾರಿಗೆ ತರಬಹುದಾದ ಉಪಾಯವೆಂದರೆ ಹಿಂಸಾಮಾರ್ಗವೇ. ಹಿಂಸಾ ಮಾರ್ಗ ಹಿಡಿಯಲು ಯಾವುದೇ ತರಬೇತಿ ಬೇಕಿಲ್ಲ. ಯಾವುದೇ ತರ್ಕ ಬೇಕಿಲ್ಲ, ಯಾವುದೇ ವಿಶಿಷ್ಟವಾದ ಸಾಧನ ಬೇಕಿಲ್ಲ. ಕಾನೂನು ಮಾರ್ಗ ಬಳಸಾದುದಾದರೆ ಹಿಂಸಾಮಾರ್ಗ ನೇರವಾದುದು.

ಇಂಥ ಪರಿಸ್ಥಿತಿಯಲ್ಲಿ ಸಮಸ್ಯೆಗಳ ಪರಿಹಾರಕ್ಕೆ ಹಿಂಸೆಯೊಂದೇ ಉಪಾಯವಾಗಿ ಉಳಿಯುವುದಾದರೆ ಅದೊಂದ ಮಾನವಕುಲದ ದುರಂತ. ಜೀವನ ಪವಿತ್ರವಾದ ವಸ್ತು, ಅದರ ಉಳಿವು ಮತ್ತು ಗೌರವ ಎಲ್ಲರಿಗೂ ಸೇರಿದ್ದು ಎಂದು ನಂಬಿದ್ದ ಗಾಂಧೀಜಿ ಹಿಂಸೆಯ ವಿರೋಧವಾಗಿ ಅಹಿಂಸೆಯನ್ನು ಪ್ರತಿಪಾದಿಸಿದರು. ಸಮಸ್ಯೆಗಳ ಪರಿಹಾರದಲ್ಲಿ ಅಹಿಂಸಾ ನೀತಿ ಎಷ್ಟೇ ಅವ್ಯವಹಾರಿಕವೆನಿಸಿದರೂ ಹಿಂಸೆ ಎಂದೂ ಶಾಶ್ವತವಾದ ನೀತಿಯಾಗಿರಲು ಸಾಧ್ಯವಿಲ್ಲ. ಪ್ರಾರಂಭದಲ್ಲಿ ಹಿಂಸಾಶಕ್ತಿಯ ಕೈ ಮೇಲಾದರೂ, ಅಂತಿಮವಾಗಿ ಗೆಲ್ಲುವುದು ಅಹಿಂಸೆಯೇ. ಹಿಂಸೆಯ ಬೂದಿಯೊಳಗಿಂದಲೇ ಅಹಿಂಸೆಯ ಹುಟ್ಟು. ಇದು ಪ್ರಕೃತಿ ನಿಯಮ.

ಈಗ ದೇಶದಲ್ಲಿ ಏನೆಲ್ಲ ಮೂಲ ಸಮಸ್ಯೆಗಳಿವೆ ಅವುಗಳ ವೈಜ್ಞಾನಿಕ ಅಧ್ಯಯನ ನಡೆಯಬೇಕು. ಈಗಾಗಲೇ ಹಿಂಸೆಯ ವಿರುದ್ಧ ಅಹಿಂಸೆಯ ಅನ್ವಯ ಹೇಗೆ ಎಂಬ ವಿಷಯವಾಗಿ ಪ್ರತಿಯೊಂದು ದೇಶದಲ್ಲೂ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲೂ ಚರ್ಚೆ ಮತ್ತು ಸಂಶೋಧನೆ ನಡೆಯುತ್ತಿವೆ, ಈ ಎಲ್ಲದರ ಪರಿಣಾಮವಾಗಿಯೋ ಏನೋ ಎಂಬಂತೆ ಹಲವಾರು ವರ್ಷಗಳಿಂದ ಅಮೇರಿಕಾ ಮತ್ತು ರಶಿಯಾದ ಮಧ್ಯ ನಡೆಯುತ್ತಿದ್ದ 'ಶೀತ ಯುದ್ಧ' ಮುಕ್ತಾಯವಾಯಿತು. ನಂತರ ವೈರತ್ವ ಮತ್ತು ಹಿಂಸಾಚಾರದ ಸಂಕೇತವಾಗಿ ಜರ್ಮನ್ ದೇಶದ ಮಧ್ಯ ನಿರ್ಮಾಣವಾಗಿದ್ದ ಬರ್ಲಿನ್ ಗೋಡೆ ೧೯೮೯ ರಲ್ಲಿ ಕೆಡವಲ್ಪಟ್ಟಾಗ ಎರಡು ಮಹಾಯುದ್ಧಗಳ ನಿರರ್ಥಕತೆಯನ್ನು ಸಾಬೀತಾಯಿತಲ್ಲದೆ ಶಾಂತಿ ಮತ್ತು ಅಹಿಂಸೆಯ ಮೂಲಕ ಎಂಥ ಕಠಿಣ ಸಮಸ್ಯೆಗಳನ್ನೂ ಪರಿಹರಿಸಬಹುದೆಂಬ ಪಾಠವನ್ನು ಪ್ರಪಂಚ ಕಲಿಯಿತು; ಈಗ ಅಂಥದೇ ಅಹಿಂಸಾ ಮಾರ್ಗವನ್ನು ಕೋರಿಯಾ ಅನುಸರಿಸುತ್ತಿದೆ.

ಕಾವೇರಿ ನೀರಿನ ವಿವಾದ ಮೇಲುನೋಟಕ್ಕೆ ರಾಜಕಾರಣಪ್ರಣೀತವಾದ ಮತ್ತು ಆಡಳಿತಾತ್ಮಕವಾದ ಸಮಸ್ಯೆಯೆಂದು ತೋರಿದರೂ ಅದು ಮೂಲಭೂತವಾಗಿ ಮಾನವೀಯ ಸಮಸ್ಯೆಯಾಗಿದೆ. ಆದ್ದರಿಂದ ಸಮಸ್ಯೆಯ ಪರಿಹಾರದ ಮೂಲವನ್ನು ಮಾನವೀಯ ಅಂಶಗಳಲ್ಲಿಯೇ ಹುಡುಕಬೇಕಾಗು

ತ್ತದೆ. ಹಾಗೆ ಮಾಡದೇ ಹೋದಲ್ಲಿ ತನ್ನ ನೆರಳನ್ನು ಭೂತವೆಂದು ಭಾವಿಸಿ ಅದನ್ನು ಕೋಲಿನಿಂದ ಹೊಡೆದಂತಾಗುತ್ತದೆ. ಈ ಸಂಗತಿಯನ್ನು ಕಾವೇರಿ ವಿವಾದದ ಪರಿಹಾರದಲ್ಲಿ ಆಸಕ್ತಿಯುಳ್ಳವರೆಲ್ಲ ಎಷ್ಟು ಬೇಗ ಅರಿತುಕೊಳ್ಳು ಎಷ್ಟು ಬೇಗ ಅರಿತುಕೊಳ್ಳುತ್ತಾರೋ ಅಷ್ಟೂ ಒಳ್ಳೆಯದು. ಇಂಥ ಒಂದು ಆಶಾಕಿರಣ ಕರ್ನಾಟಕದ ಮುಖ್ಯಮಂತ್ರಿ ಕೃಷ್ಣರವರ ಮನೋಭಿತ್ತಿ ಯಲ್ಲಿ ಮೂಡಿರುವುದು ಅತ್ಯಂತ ಸಂತಸದ ಸಂಗತಿ ಜಯಲಲಿತಾರವರನ್ನು ಮಾತುಕತೆಗಾಗಿ ಆಹ್ವಾನಿಸಿ ಕೃಷ್ಣರವರು ತಮ್ಮ ರಾಜಕೀಯ ಮುತ್ಸದ್ಧಿತನ ವನ್ನು ಮೆರೆದಿದ್ದಾರೆ. ಜಯಲಲಿತಾ ಕೂಡ ತಮ್ಮ ರಾಜಕೀಯ ಕನ್ನಡಕ ವನ್ನು ತೆಗೆದುಹಾಕಿ ಸತ್ಯವೆಂಬ ಸ್ವಚ್ಛವಾದ ಸೂರ್ಯನಬೆಳಕನ್ನು ನೋಡಲಿ ಕೃಷ್ಣರ ಜೊತೆಗೂಡಿ ಕಾವೇರಿವಿವಾದವನ್ನು ಅಹಿಂಸಾತ್ಮಕವಾಗಿ ಪರಿಹರಿಸು ವಂತಾಗಿ ಹಿಂಸೆಗೆ ಪರ್ಯಾಯವಾದ ಮಾರ್ಗ ಅಹಿಂಸೆಯೊಂದೇ ಎಂಬ ಸಿದ್ಧಾಂತ ಜಗತ್ತಿಗೆ ತೋರಿಸಲಿ, ಕೃಷ್ಣ ಮತ್ತು ಜಯಲಲಿತಾ ಅಹಿಂಸಾ ಉಪಾಯದಲ್ಲಿ ತೊಡಗಿದರೆ ಬೇರೆ ಎಲ್ಲ ಜನರೂ ಅವರಿಗೆ ನೈತಿಕ ಬೆಂಬಲ ಕೊಡಬೇಕು. ಈಗಾಗಲೇ ರೈತಸಂಘ ಕೃಷ್ಣರವರ ಅಹಿಂಸಾತ್ಮಕ ಕ್ರಮಕ್ಕೆ ಬೆಂಬಲಕೊಟ್ಟಿದೆ.

ಸಮಸ್ಯೆಗಳ ಪರಿಹಾರಕ್ಕೆ ಹಿಂಸೆ ಎಂದೂ ಸಲ್ಲದು ಎಂಬುದನ್ನು ಅಮೇರಿಕೆ ದಿಂದ ಹಿಡಿದು ದೇಶದಾದ್ಯಂತವಿರುವ ಎಲ್ಲ ಪ್ರಕಾರದ ಸಂಘರ್ಷ ಸಂಘಟನೆ ಗಳಿಗೆ ತಿಳಿಯಪಡಿಸುವ ಪ್ರಯತ್ನ ಅಗತ್ಯವಾಗಿದೆ.

ಅಫಘಾನಿಸ್ಥಾನದಲ್ಲಿ ಅಮೇರಿಕ ತಪ್ಪು ಸಾಧನವನ್ನು ಉಪಯೋಗಿಸಿದ್ದರ ಪರಿಣಾಮವಾಗಿಯೇ ಅದು ಬಿನ್‌ಲಾಡೆನ್‌ನಂಥ ವ್ಯಕ್ತಿಗಳನ್ನು ಸೃಷ್ಟಿಸಿತು ಮತ್ತು ಅವರ ಹಿಂಸುಪ್ರವೃತ್ತಿಗೆ ಸೆಪ್ಟೆಂಬರ್ ೧೧ರೊಂದು ಬಲಿಯಾಯಿತು. ಈಗ ಇರಾಕ್‌ನೊಂದಿಗೆ ಅಂಥದೇ ತಪ್ಪನ್ನು ಅಮೇರಿಕಾ ಮಾಡುತ್ತಿದೆ.

ಭಯೋತ್ಪಾದನೆ ಆಧುನಿಕ ಜಗತ್ತಿನ ವ್ಯಾಧಿಯಾಗಿದೆ. ಅದು ಕಡಿಮೆ ಯಾಗುವುದರ ಬದಲು ಹೆಚ್ಚಾಗುತ್ತಿದೆ. ಇದಕ್ಕೆ ಕಾರಣವೇನೆಂದರೆ ಸರ್ಕಾರ ಗಳು ಭಯೋತ್ಪಾದಕರ ವಿರುದ್ಧ ಹೋರಾಡುತ್ತಿವೆಯೇ ಹೊರತು ಭಯೋತ್ಪಾದ ಕತೆಯ ವಿರುದ್ಧವಲ್ಲ. ಇದರಿಂದಾಗಿ ಸೇಡಿಗೆ ಸೇಡು ಎಂಬ ಮನೋಭಾವ ಭಯೋತ್ಪಾದಕರಲ್ಲಿ ಮೂಡಿ ಭಯೋತ್ಪಾದನೆ ಹೆಚ್ಚಾಗುತ್ತಿದೆ. ಇದರಿಂದ ನಾವು ಕಲಿಯಬೇಕಾದ ಪಾಠವೇನೆಂದರೆ ಹಿಂಸೆಗೆ ಪ್ರತಿ ಹಿಂಸೆ ಉತ್ತರವಾಗ ಲಾರದು. ★

೩೨ ನೇ ಪುಟದಿಂದ

ಗಾಂಧೀ, ನೆಹರು, ಜೆ. ಪಿ. ಮತ್ತು ವಿನೋಬಾ

ಭಾರತೀಯ ಸಂಸ್ಕೃತಿ ವಿಚಾರಕ್ಕೆ ಪ್ರಾಧಾನ್ಯತೆ ಕೊಡುತ್ತದೆ. ಆದ್ದರಿಂದ ಗಾಂಧೀ ಸಂಘ ಇತ್ಯಾದಿ ಹೆಸರಿಡುವ ಬದಲು "ಸರ್ವೋದಯ ಸಮಾಜ" ಎಂಬ ಹೆಸರಿಡುವುದು ಸೂಕ್ತ" ಎಂದು ವಿನೋಬಾ ಸಲಹೆಕೊಟ್ಟರು. ಅಂದಿನಿಂದ ದೇಶದಲ್ಲಿ "ಸರ್ವೋದಯ ಸಮಾಜ"ದ ಸ್ಥಾಪನೆಗಾಗಿ ತಮ್ಮ ಜೀವನವನ್ನು ವಿನೋಬಾ ಮುಡಿಪಾಗಿಟ್ಟರು. ಅವರ ಜೀವಿತ ಅವಧಿ ಎಂಭತ್ತೇಳು ವರ್ಷ. ಇಡೀ ಆಯುಷ್ಯವನ್ನು ಗಾಂಧೀ ವಿಚಾರಕ್ಕಾಗಿಯೇ ವಿನೋಬಾ ಸವೆಸಿದರು. ಗಾಳಿ, ನೀರು. ಬೆಳಕಿನಂತೆ ಭೂಮಿಯು ಸಹ ಗೋಪಾಲನದು ಅಂದರೆ ಎಲ್ಲರಿಗೂ ಸೇರಿದ್ದು ಎಂಬ ವಿಚಾರವನ್ನು ದೇಶದ ಮುಂದೆ ಇಟ್ಟರು. ಭೂಮಿಯ ಮೇಲಿನ ವ್ಯಕ್ತಿಗತ ಒಡೆತನ ಹೋಗಬೇಕೆಂಬ ವಿಚಾರವನ್ನು ದೇಶದ ಉದ್ದಗಲಕ್ಕೂ ಓಡಾಡಿ ಪ್ರಚಾರ ಮಾಡಿದರು. ದೇಶದ ಪ್ರತಿ ಹಳ್ಳಿಯೂ ಜೀವನದ ಪ್ರತಿಯೊಂದು ಅವಶ್ಯಕತೆಗಳಲ್ಲಿ ಸ್ವಾವಲಂಬಿತವಾಗುವುದರ ಮೂಲಕ ಗ್ರಾಮ ಸ್ವರಾಜ್ಯವನ್ನು ಸಾಧಿಸಬೇಕೆಂಬ ಯೋಜನೆಯನ್ನು ದೇಶದ ಮುಂದಿಟ್ಟರು. ದಿಲ್ಲಿಯಲ್ಲಿ ಹೆಪ್ಪುಗಟ್ಟಿರುವ ರಾಜ್ಯಶಕ್ತಿ ಗ್ರಾಮ-ಗ್ರಾಮಗಳಿಗೆ ಹರಿದು ಹೋಗಿ ಅದು ಲೋಕಶಕ್ತಿಯಾಗಿ ಪರಿವರ್ತಿತಗೊಳ್ಳಬೇಕೆಂಬ ಸಂದೇಶವನ್ನು ವಿನೋಬಾ ತಮ್ಮ ದೇಶದಾದ್ಯಂತ ನಡೆಸಿದ ಪಾದಯಾತ್ರೆಯ ಮೂಲಕ ಬಿತ್ತರಿಸಿದರು. ಈ ಕಾರ್ಯವನ್ನು ಅವರು ಒಂದೆರಡು ವರ್ಷವಲ್ಲ ಅಖಂಡವಾಗಿ ಹದಿನಾಲ್ಕು ವರ್ಷಗಳ ಕಾಲ ನಡೆಸಿದರು. ಆಗ ಅವರಿಗೆ ಐವತ್ತೈದು ವರ್ಷದ ಇಳಿವಯಸ್ಸು. ಗ್ರಾಮ ಸ್ವರಾಜ್ಯ, ಲೋಕಶಕ್ತಿ ಮತ್ತು ಸರ್ವೋದಯ ಸಮಾಜದ ವಿಚಾರದೊಂದಿಗೆ ಮೂವತ್ತಾರು ಸಾವಿರ ಮೈಲಿ ಚಳಿ-ಮಳೆ-ಗಾಳಿ-ಬಿಸಿಲು ಲೆಕ್ಕಿಸದೆ ನಡೆದಿದ್ದಾರೆ. ಈ ಪರಿಶ್ರಮದ ಫಲವಾಗಿ ೪೨ ಲಕ್ಷ ಎಕರ ಭೂಮಿಯನ್ನು ಚಿಕ್ಕ ದೊಡ್ಡ ಭೂಮಾಲಿಕರಿಂದ ಸ್ವಪ್ರೇರಣೆಯಿಂದ ಪಡೆದು ಲಕ್ಷಾಂತರ ಭೂಹೀನರಿಗೆ ಹಂಚುವುದರ ಮೂಲಕ ಅಭೂತಪೂರ್ವವಾದ ಇತಿಹಾಸವನ್ನು ಸೃಷ್ಟಿಸಿದರು. ಭೂಮಿಯ ಮೇಲಿನ ಮನುಷ್ಯನ ಒಡೆತನವನ್ನು ಸುಳ್ಳಾಗಿಸಿದರು. ಯಾವುದನ್ನು ಸಾಧಿಸಲು ರಶಿಯಾ-ಚೀಣಾದಂಥ ಮಹಾನ್ ಸಾಮ್ಯವಾದಿ ದೇಶಗಳು ವಿಫಲವಾದವೋ ಅಂಥದನ್ನು ವಿನೋಬಾ ಸತ್ಯ-ಅಹಿಂಸ-ಪ್ರೇಮ-ಕರುಣೆಯ ಮೂಲಕ ಸಾಧಿಸಿ ತೋರಿಸಿದರು. ★

ಭಾರತದ ಅಧಿಕ ಜನಸಂಖ್ಯೆ ಮತ್ತು ಆಹಾರದ ಕೊರತೆ ಒಂದು ಲಘು ಟಿಪ್ಪಣಿ

-ಡಾ॥ ನರೇಂದ್ರಸಿಂಗ್

ಭಾರತದಲ್ಲಿ ಅಧಿಕ ಜನಸಂಖ್ಯೆಯಿಂದಾಗಿ ಆಹಾರದ ಕೊರತೆ ಇದೆ ಎಂದು ಎಲ್ಲೆಲ್ಲೂ ನಮಗೆ ಹೇಳಲಾಗುತ್ತಿದೆ. ಈ ಹೇಳಿಕೆಯನ್ನು ಹತ್ತಿರದಿಂದ ಪರಿಶೀಲಿಸಬೇಕಾಗುತ್ತದೆ. ಈ ಸಮಸ್ಯೆಯನ್ನು ಪೂರ್ಣ ಅರ್ಥಮಾಡಿಕೊಳ್ಳಬೇಕಾದರೆ ಈ ಅಧಿಕ ಜನಸಂಖ್ಯೆಯ ವಾದವನ್ನು ಪರೀಕ್ಷೆಗೊಳಪಡಿಸಿಯೇ ನೋಡಬೇಕಾಗುತ್ತದೆ. ಸಾಮಾನ್ಯ ಬಳಕೆಯಲ್ಲಿ ಅಧಿಕ ಜನಸಂಖ್ಯೆಯ ಪದಕ್ಕೆ ಎರಡು ಅರ್ಥಗಳಿವೆ, ಒಂದು : ಹೆಚ್ಚು ಜನಸಾಂದ್ರತೆ, ಇಡೀ ಜನಸಂಖ್ಯೆಯನ್ನು ಪ್ರತಿ ಚದರ ಕಿಲೋಮೀಟರಿಗೆ ಹಂಚಿದಾಗ ಬರುವ ಸಂಖ್ಯೆ. ಎರಡು : ಬೃಹತ್ ಜನಸಂಖ್ಯೆ, ಈ ಎರಡು ಪರಿಸ್ಥಿತಿಯಲ್ಲೂ ಆಹಾರ ಪೂರೈಕೆಯ ಕೆಲಸ ಕಷ್ಟವಾಗುತ್ತದೆ.

ಭಾರತದಲ್ಲಿ ಪ್ರತಿ ಚದರ ಕಿಲೋಮೀಟರ್ ಪ್ರದೇಶದಲ್ಲಿ ೧೭೨ ಜನರಿದ್ದಾರೆ. ಇದನ್ನು ಹೆಚ್ಚು ಜನಸಾಂದ್ರತೆಯ ಪ್ರದೇಶ ಅನ್ನಬಹುದೆ? ಕೆಲವು ದೇಶಗಳ ಜನಸಾಂದ್ರತೆಯನ್ನೂ ಪರಿಶೀಲಿಸಬೇಕಾಗುತ್ತದೆ. ಬೆಲ್ಜಿಯಂನಲ್ಲಿ ಜನಸಾಂದ್ರತೆ ೩೧೬, ನೆದರ್ ಲ್ಯಾಂಡಿನಲ್ಲಿ ೩[illegible]೫, ಜಪಾನಿನಲ್ಲಿ ೨೭೭, ಪಶ್ಚಿಮ ಜರ್ಮನಿಯಲ್ಲಿ ೨೪೭; ಇಂಗ್ಲೆಂಡಿನಲ್ಲಿ ೨೨೮, ಮತ್ತು ಇಟಲಿಯಲ್ಲಿ ೧೭೭ ಜನರು ಒಂದು ಕಿಲೋಮೀಟರ್ ಪ್ರದೇಶಕ್ಕೆ ಬರುತ್ತಾರೆ. ಭಾರತಕ್ಕೆ ಅನ್ವಯಿಸಿ ಹೇಳಿದಂತೆ ಈ ಯಾವ ದೇಶಗಳಲ್ಲಿಯೂ ಅಧಿಕ ಜನಸಂಖ್ಯೆಯಿಂದಾಗಿ ಆಹಾರದ ಕೊರತೆ ಇದೆ ಎಂದು ಹೇಳುವುದು ಕಂಡುಬರುವುದಿಲ್ಲ. ಅಧಿಕ ಜನಸಂಖ್ಯೆಯು ಜನಸಾಂದ್ರತೆಯನ್ನು ಹೆಚ್ಚಿಸುವುದಕ್ಕಾಗಲೀ, ಆಹಾರದ ಸಮಸ್ಯೆಯನ್ನು ದೇಶದಲ್ಲಿ ಹುಟ್ಟಿಸುವುದಕ್ಕಾಗಲೀ, ಕಾರಣವಲ್ಲವೆಂದು ಇದರಿಂದ ಅರ್ಥವಾಗುತ್ತದೆ. ಐವತ್ತಾರು ಕೋಟಿಗೂ ಮೀರಿದ ಭಾರತದ ಜನ ಸಂಖ್ಯೆಯನ್ನು ಸಂಖ್ಯೆಯ ದೃಷ್ಟಿಯಿಂದ ನೋಡಿದರೆ, ಮೇಲೆ ಉದಹರಿಸಿದ ಯಾವ ದೇಶಗಳಲ್ಲೂ ಈ ಭಾರತದಷ್ಟು ಜನಸಂಖ್ಯೆ ಇಲ್ಲ. ಆದ್ದರಿಂದ ದೇಶವನ್ನು ಚಿಕ್ಕ ಚಿಕ್ಕ ಪ್ರಾಂತಗಳಾಗಿ ವಿಂಗಡಿಸಿಯೆಂದು ಯಾರಾದರೂ ಸೂಚಿಸಬಹುದು. ಆದರೆ ಈ "ಅಧಿಕ ಜನಸಂಖ್ಯೆ"ಯ ವಾದವನ್ನು ಎತ್ತಿ ಹಿಡಿಯುವ ಯಾವ ವಕ್ತಾರರೂ ಈ ಸೂಚನೆಯನ್ನು ಕೊಟ್ಟಿಲ್ಲ. ಚಿಕ್ಕ ದೇಶಗಳಾಗಿದ್ದು ಸಣ್ಣ ಜನ ಸಂಖ್ಯೆಯನ್ನು ಹೊಂದಿರುವ, ಏಷ್ಯಾ ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾ ದೇಶಗಳ ಅನುಭವವನ್ನು ನೋಡಿದರೆ ಈ ಸೂಚನೆ ಖಂಡಿತಾ ಪರಿಹಾರವಲ್ಲ ಎನ್ನುವುದು ಗೊತ್ತಾಗುತ್ತದೆ. ಪ್ರಪಂಚದಲ್ಲಿ ಅತಿ ಹೆಚ್ಚು ಜನಸಂಖ್ಯೆಯನ್ನು ಪಡೆದಿರುವ ನಮ್ಮ ಪಕ್ಕದ ದೇಶವಾದ ಚೈನಾದಲ್ಲಿ ಎಂಭತ್ತು ಕೋಟಿ ಜನರಿದ್ದಾರೆ.

ವಿಶ್ವಸಂಸ್ಥೆಯ "ವರ್ಲ್ಡ್ ಹೆಲ್ತ್" (ಸೆಪ್ಟೆಂಬರ್ ೧೯೭೪) ಮತ್ತು ಪಾಶ್ಚಾತ್ಯ ಪತ್ರಿಕೆಯಾದ "ನ್ಯೂ ಬ್ರಿಟಿಷ್ ರಿವ್ಯೂ" (ಅಕ್ಟೋಬರ್ ೧೯೭೪)ನಲ್ಲಿನ ವರದಿಗಳಂತೆ ಚೈನಾದಲ್ಲಿ ಮಕ್ಕಳ ಹಾಗೂ ಇತರ ಜನರ ಆರೋಗ್ಯ ತುಂಬಾ ಚೆನ್ನಾಗಿದ್ದು ಅವರು ಪೌಷ್ಟಿಕಾಂಶಗಳ ಕೊರತೆಯಿಂದ ನರಳುವುದಿಲ್ಲ ಎಂದು ಅನ್ನುತ್ತವೆ. ಅದೇ ಪತ್ರಿಕೆಗಳ ಪ್ರಕಾರ ಚೈನಾದಲ್ಲಿ ೧.೦೯ ದಶಲಕ್ಷ ಚದರ ಕಿಲೋ ಮೀಟರ್‌ನಷ್ಟು ಮಾತ್ರ ವ್ಯವಸಾಯ ಯೋಗ್ಯ ಜಮೀನಿದೆ. ಭಾರತದಲ್ಲಿ ೧.೬೪ ದಶಲಕ್ಷ ಚದರ ಕಿಲೋ ಮೀಟರ್‌ನಷ್ಟು ವ್ಯವಸಾಯ ಯೋಗ್ಯ ಭೂಮಿ ಇದೆ. ಈ ಎರಡು ದೇಶಗಳು ಪ್ರಪಂಚದಲ್ಲಿ ಅಧಿಕ ಸಂಖ್ಯೆ ಇರುವ ೨ ದೇಶಗಳಾಗಿವೆ. ವ್ಯವಸಾಯ ಭೂಮಿಗೂ ಜನಸಾಂದ್ರತೆಗೂ ಇರುವ ಪ್ರಮಾಣ ನೋಡಿದರೆ ಚೈನಾ ದೇಶದಲ್ಲಿ ಪ್ರತಿ ಚದರ ಕಿ. ಮೀ ಪ್ರದೇಶಕ್ಕೆ ೭೩೧ ಜನರಿದ್ದಾರೆ. ಭಾರತದಲ್ಲಿರುವ ಸಾಂದ್ರತೆಗಿಂತ ಎರಡು ಪಟ್ಟು ಹೆಚ್ಚು. ಚೈನಾದಲ್ಲಿ ಭೀಕರ ಆಹಾರ ಸಮಸ್ಯೆ ತಲೆದೋರಿಲ್ಲ ಎಂದು ವಿಶ್ವಸಂಸ್ಥೆಯ ಪತ್ರಿಕೆ ಹೇಳುತ್ತದೆ. ಇದು ಹೇಗೆ ಸಾಧ್ಯ? ಕಾರಣಗಳೇನು ಎಂಬುದು ಇಲ್ಲಿ ಅಪ್ರಸ್ತುತ. ಈ ಲೇಖನದ ವ್ಯಾಪ್ತಿ "ಅಧಿಕ ಜನಸಂಖ್ಯೆ"ಯನ್ನು ಮಾತ್ರ ಕುರಿತದ್ದಾಗಿದೆ.

"ಅಧಿಕ ಜನಸಂಖ್ಯೆ"ಯಿಂದಲೇ ನಮ್ಮ ದೇಶದ ಆಹಾರ ಸಮಸ್ಯೆ ಎನ್ನುವ ಹೇಳಿಕೆಗೆ ಪ್ರಬಲವಾದ ಯಾವ ಸಮರ್ಥನೆಯೂ, ಆಧಾರವೂ, ದೊರೆಯುವುದಿಲ್ಲವಾದ ಕಾರಣ ನಮ್ಮ ಆಹಾರ ಸಮಸ್ಯೆ ಅಧಿಕ ಜನಸಂಖ್ಯೆಯಿಂದಲ್ಲ ಎಂದೆನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ನಮ್ಮ ದೇಶದ ಆಹಾರ ಸಮಸ್ಯೆ ಅಧಿಕ ಜನಸಂಖ್ಯೆಯಿಂದ ಅನ್ನುವುದು ಜನರನ್ನು ತಪ್ಪು ದಾರಿಗೆ ಎಳೆದಂತಾಗುತ್ತದೆ. ನಮ್ಮ ವಿಫಲತೆಯನ್ನು ಮುಚ್ಚಿಕೊಳ್ಳಲು ಮಾಡಿದ ಇಲ್ಲವೇ ಮುಖ್ಯ ವಿಷಯಗಳಿಂದ ಗಮನವನ್ನು ತಿರುಗಿಸುವ ಯತ್ನವಾಗುತ್ತದೆ.

'ಅಧಿಕ ಜನಸಂಖ್ಯೆ'ಯು ಅಸಂಬದ್ಧವಾದವನ್ನು ಕುಟುಂಬ ಯೋಜನೆಗೆ ಸಂಬಂಧಪಟ್ಟಂತೆ ಚರ್ಚಿಸುವುದು ಆವಶ್ಯಕವಾಗುತ್ತದೆ. ದೇಶದಲ್ಲಿ ಜನಸಂಖ್ಯೆಯ ಏರಿಕೆಯ ದರ ಏರುತ್ತಿದೆ. ಹೀಗೆ ಮುಂದಿನ ಕೆಲವು ವರ್ಷಗಳಲ್ಲಿ ಜನಸಂಖ್ಯೆಯು ಬಗ್ಗಿಸಲಾಗದ ಒಂದು ಪೆಡಂಭೂತವಾಗಿ ಬೆಳೆದು ಬಿಡುತ್ತದೆ ಎಂದು ಹೇಳಲಾಗುತ್ತಿದೆ. ಅದಕ್ಕಾಗಿ /ಕುಟುಂಬ ಯೋಜನೆಗಳಿಗೆ ಇಷ್ಟೊಂದು ಪ್ರಚಾರ ಕೊಡಬೇಕಾಗಿದೆ ಎನ್ನುತ್ತಾರೆ. ಭಾರತದಲ್ಲಿ ಜನಸಂಖ್ಯೆಯ ಏರಿಕೆಯ ದರ ಶೇಕಡ ೨೫ರಷ್ಟಿದೆ. ಅಭಿವೃದ್ಧಿ ಹೊಂದುತ್ತಿರುವ ಇನ್ನೂ ಅನೇಕ ದೇಶಗಳಲ್ಲಿ ಏರಿಕೆಯ ದರ ಇನ್ನೂ ಹೆಚ್ಚಾಗಿದೆ. ಉದಾಹರಣೆಗೆ, ಕನ್ಯಾದಲ್ಲಿ ಜನಸಂಖ್ಯೆ ಏರಿಕೆಯ ದರ ೨.೯ ಡಿಗ್ರಿ, ಮೆಕ್ಸಿಕೊ ದೇಶದಲ್ಲಿ ಶೇ. ೩.೫, ಮತ್ತು ಫಿಲಿಫೈನ್ಸ್‌ನಲ್ಲಿ ಅದು ಶೇ. ೩.೩ರಷ್ಟು ಏರುತ್ತಿದೆ. ಭಾರತದಲ್ಲಾಗಲೀ ಮೇಲೆ ಹೇಳಿದ ದೇಶಗಳಲ್ಲಾಗಲೀ

ಕುಟುಂಬ ಯೋಜನೆಯ ಪ್ರಚಾರದಿಂದ ಜನಸಂಖ್ಯೆಯ ಏರಿಕೆ ಗಣನೀಯವಾಗೇನೂ ಇಳಿದಿಲ್ಲ. ಕೈಗಾರಿಕೆಗಳು ಬೆಳೆದು ಮುಂದುವರಿದಿರುವ ದೇಶಗಳಲ್ಲಿ ಜನನ ದರ ಮತ್ತು ಜನಸಂಖ್ಯೆ ಏರಿಕೆಯ ದರ ಯಾವಾಗಲೂ ಕಡಿಮೆಯಾಗಿಯೇ ಇವೆ. ಈ ಮುಂದುವರಿದ ರಾಷ್ಟ್ರಗಳು ಹೇಗೆ ಜನಸಂಖ್ಯೆ ಏರಿಕೆಯ ದರವನ್ನು ಹತೋಟಿಯಲ್ಲಿಟ್ಟುಕೊಂಡರೆಂಬುದು ಸ್ವಾರಸ್ಯಕರ ಸಂಗತಿಗಳು. ಆ ದೇಶದಲ್ಲಿನ ಉತ್ತಮ ಜೀವನ ಸ್ಥಿತಿ, ಸಮಾಜ ಕಲ್ಯಾಣ ಸಂಸ್ಥೆಗಳು. ಆರೋಗ್ಯ ಕೇಂದ್ರಗಳು, ವೃದ್ಧಾಪ್ಯ. ಮತ್ತು ಉದ್ಯೋಗದ ಭದ್ರತೆ ಮುಂತಾದ ಸೌಲಭ್ಯಗಳು ಜನಸಂಖ್ಯೆ ಏರಿಕೆಯ ದರವನ್ನು ಇಳಿಸಲು ಮತ್ತು ಕಡಿಮೆ ಇರುವಂತೆ ಮಾಡಲು ತುಂಬಾ ಪ್ರಭಾವ ಬೀರಿವೆ. ಇನ್ನೊಂದು ದೊಡ್ಡ ಜನಸಂಖ್ಯೆಯ ದೇಶವಾದ ಚೈನಾದೇಶ ಕಳೆದ ದಶಕದಲ್ಲಿ ಶೇ. ೧.೪ರಷ್ಟು ಏರಿಕೆಯ ದರವನ್ನು ಇಳಿಸಿದೆ. ಬ್ರಿಟಿಷ್ ಕಮರ್ಷಿಯಲ್ ಪತ್ರಿಕೆಯೊಂದಾದ "ಫಾರ್ ಈಸ್ಟ್ ಅಂಡ್ ಟ್ರೇಡ್ ಡೆವಲಪ್‌ಮೆಂಟ್"ನ (ಮಾರ್ಚ್ ೧ ಏಪ್ರಿಲ್ ೧೯೭೪)ರ ಸಂಚಿಕೆಯಲ್ಲಿ ಚೈನಾ ವಿಧಾನದ ಬಗ್ಗೆ ಕೆಲವು ವಿವರಗಳನ್ನು ಕೊಟ್ಟಿದೆ. ಆ ವರದಿಯಂತೆ, ಚೈನಾ ದೇಶ ಯೋಜನೆಗಳಿಗನುಸಾರವಾಗಿ ಆಹಾರವನ್ನು ಉತ್ಪಾದಿಸುತ್ತದೆ. ಕುಟುಂಬ ಯೋಜನೆ, ಚೈನೀಯರ ಬಾಲ್ಯ ವಿವಾಹ, ಸಂಪ್ರದಾಯ ಪಾಲನೆ, ಮತ್ತು ದೊಡ್ಡ ಸಂಸಾರಗಳಿರಬೇಕೆಂಬ ಆಸೆ ಮುಂತಾದವುಗಳನ್ನು ವಿರೋಧಿಸುತ್ತಿತ್ತು. ಚೈನಾದಲ್ಲಿ ಕುಟುಂಬಯೋಜನೆಯೆಂದೇ ಆದ ಬೇರೆ ಕಾರ್ಯಕ್ರಮಗಳು ಇರಲಿಲ್ಲ. ಅದು ವ್ಯಕ್ತಿಗೆ ಸಂಪರ್ಕವಿರುವ ಸಂಸ್ಥೆಗಳ ಮೂಲಕ ವ್ಯಕ್ತಿಯ ಜೀವನ ದೃಷ್ಟಿಯೇ ಬದಲಾಯಿಸುವಂತೆ ಕೆಲಸ ಮಾಡಿತು. ಜನರಿಗೆ ಒದಗಿಸಿದ ಇತರ ಸೌಲಭ್ಯಗಳಾದ ಆಹಾರ ಮತ್ತು ಬಟ್ಟೆಗಳ ಪೂರೈಕೆ; ಸಾಮಾನ್ಯ ಆರೋಗ್ಯಸೇವೆ; ಮಕ್ಕಳ ಸಾವಿನ ತಡೆ; ಸಾಮಾಜಿಕ ಭದ್ರತೆಯ ಸೌಲಭ್ಯಗಳು; ಸ್ತ್ರೀ ವಿಮೋಚನಾ ಚಳುವಳಿ ಕಾರ್ಯಕ್ರಮ ಮುಂತಾದವುಗಳ ಮೂಲಕ ಕುಟುಂಬ ಯೋಜನೆಯನ್ನು ಸಾಧಿಸುವುದು ಅದರ ಕೆಲಸದ ವಿಧಾನವಾಗಿತ್ತು. ಜನರು ಯಾವ ಸನ್ನಿವೇಶದ ಒತ್ತಡದಿಂದ ಹೆಚ್ಚು ಮಕ್ಕಳಿರಬೇಕೆಂದು ಬಯಸುತ್ತಾರೋ, ಆ ಸನ್ನಿವೇಶವನ್ನೇ ಬದಲಾಯಿಸುವುದು ಸರಿ ಎಂಬುದಾಗಿ ಭಾವಿಸಿ ಆ ದೇಶ ಸಮಸ್ಯೆಯ ಬುಡವನ್ನೇ ಸರಿ ಮಾಡಲು ಪ್ರಯತ್ನಿಸಿತು. ಆ ದೇಶದಲ್ಲಿ ಜನರು ಯಾವ ಕಾರಣಗಳಿಂದಾಗಿ ಹೆಚ್ಚು ಮಕ್ಕಳಿರಬೇಕೆಂದು ಬಯಸುತ್ತಿದ್ದರೋ ಹೆಚ್ಚು ಕಡಿಮೆ ಅದೇ ಕಾರಣಗಳಿಗಾಗಿ ಭಾರತದ ಜನರೂ ಹೆಚ್ಚು ಮಕ್ಕಳನ್ನು ಬಯಸುತ್ತಾರೆಂಬುದನ್ನು ಯಾವ ಕುಟುಂಬ ಯೋಜನಾತಜ್ಞರಾಗಲೀ ಅಥವಾ ಯಾವ ಸಮಾಜಶಾಸ್ತ್ರಜ್ಞರಾಗಲೀ ಅಲ್ಲಗಳೆಯುವುದಿಲ್ಲ. ಆದ್ದರಿಂದ ಹೆಚ್ಚು ಮಕ್ಕಳಿರಬೇಕೆಂದು ಬಯಸಲು ಅನುಕೂಲವಾಗುವಂಥ ಸನ್ನಿವೇಶವನ್ನು ಬದಲಿಸಬೇಕು. ಅಂದರೆ ಸಮಸ್ಯೆಯ ಸಾಮಾಜಿಕ-ಆರ್ಥಿಕ ಬೇರುಗಳನ್ನು ಹುಡುಕಿ ನೋಡಬೇಕು. ಈ ಸಾಮಾಜಿಕ-

ಆರ್ಥಿಕ ಬೇರುಗಳು ಆಯಾ ಸಮಾಜ ವ್ಯವಸ್ಥೆಯಲ್ಲಿ ಇಳಿದಿರುವುದರಿಂದ ಮತ್ತು ಆ ಸಮಾಜವೂ ಆಹಾರ ಸಮಸ್ಯೆಯೊಡನೆ ನೇರ ಸಂಪರ್ಕ ಪಡೆದಿರುವುದರಿಂದ ಅದನ್ನು ಇನ್ನಷ್ಟು ಪರಿಶೀಲಿಸುವುದು ಅಗತ್ಯವಾಗುತ್ತದೆ.

ಈಗ ಉತ್ಪಾದನೆಯ ಅಂಕಿ-ಅಂಶಗಳನ್ನು ನೋಡೋಣ. ೧೯೭೨ರಲ್ಲಿ ಎಫ್.ಎ.ಒ. ವರದಿ ಪ್ರಕಾರ, ಭಾರತದ ಒಟ್ಟು ಆಹಾರ ಉತ್ಪನ್ನ ೧೦೭ ದಶಲಕ್ಷ ಟನ್ನುಗಳಷ್ಟಿತ್ತು. ಈ ಆಹಾರವನ್ನು ಇಲ್ಲಿನ ೫೬೩ ದಶಲಕ್ಷ ಜನರಿಗೆ ಸಮನಾಗಿ ಹಂಚಿದರೆ ತಲಾ ೫೦೦ ಗ್ರಾಂ ಆಹಾರ ಸಿಗುತ್ತದೆ. ಇಷ್ಟು ಪ್ರಮಾಣದ ಆಹಾರವನ್ನು ಇತರ ಆಹಾರ ವಸ್ತುಗಳೊಡನೆ ಉಪಯೋಗಿಸಿದರೆ ಒಳ್ಳೆಯ ಆರೋಗ್ಯ ಕಾಪಾಡಿಕೊಂಡಿರಲು ಮತ್ತು ಪೌಷ್ಟಿಕತೆಯನ್ನು ಉಳಿಸಿಕೊಳ್ಳಲು ಸಾಕಾಗುತ್ತದೆ. ಆಹಾರವನ್ನು ಸಮನಾಗಿ ಹಂಚುವ ಪದ್ಧತಿ ಸಧ್ಯದಲ್ಲಿ ಇಲ್ಲವಲ್ಲ.

ಲಾಭಗಳಿಸುವುದೇ ಉದ್ದೇಶವಾಗಿರುವ ಉತ್ಪಾದನಾ ಪದ್ಧತಿಯ ಯಾವುದೇ ಸಮಾಜದಲ್ಲಿ ವ್ಯಕ್ತಿಯ ಕೊಳ್ಳುವ ಸಾಮರ್ಥ್ಯ ಅವನೆಷ್ಟು ಸಂಪಾದಿಸಬಲ್ಲ ಅನ್ನುವುದರಿಂದ ತೀರ್ಮಾನವಾಗುತ್ತದೆ. ರೂಪಾಯಿಯ ಮೌಲ್ಯವೂ ಕಡಿಮೆಯಾಗಿ ಅದರ ಕೊಳ್ಳುವ ಸಾಮರ್ಥ್ಯ ಕಡಿಮೆಯಾಗುತ್ತಿರುವುದರಿಂದ ಅವನ ಸಂಪಾದನೆ ಹಾಗೂ ಕೊಳ್ಳುವ ಸಾಮರ್ಥ್ಯ ಅದನ್ನು ಅವಲಂಬಿಸಬೇಕಾಗುತ್ತದೆ. ಆಹಾರದ ಉತ್ಪಾದನೆಯಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಉತ್ಪತ್ತಿಯಾದ ಆಹಾರವನ್ನು ಇತರ ಮಾರಾಟ ವಸ್ತುಗಳ ತಯಾರಿಕೆಗಾಗಿ ಉಪಯೋಗಿಸುತ್ತಾರೆ. ಅಂದರೆ, ಪ್ರಾಣಿಗಳ ಆಹಾರ ತಯಾರಿಕೆ ಮತ್ತು ಪ್ರತಿಷ್ಠಿತ ವರ್ಗದ ಆಹಾರ ತಯಾರಿಕೆಗಾಗಿ ಉಪಯೋಗವಾಗುತ್ತಿದೆ. ಉದಾಹರಣೆಗೆ, ಗೋಧಿಯನ್ನು ಬ್ರೇಡ್, ಬಿಸ್ಕಟ್ ತಯಾರಿಸಲು, ರಾಗಿಯನ್ನು ಸಿಹಿ ತಿಂಡಿಯಾಗಿ ಮಾಡಲು, ಕಾಳುಗಳನ್ನು ಪ್ರಾಣಿಗಳಿಗೆ ಫೀಡ್ಸ್ ತಯಾರಿಸಲು ಉಪಯೋಗವಾಗುತ್ತಿದೆ. ಅಂದರೆ ಉತ್ಪತ್ತಿಯಾದ ಆಹಾರ ಅದು ಉತ್ಪತ್ತಿಯಾದ ಸ್ಥಳದ ಬಡಜನರಿಗೆ ದೊರೆಯದೆ ಹೋಗುತ್ತಿದೆ. ಸ್ಪಷ್ಟನೆಗಾಗಿ, ಗೋಧಿ ಬೆಳೆಯುವ ಪ್ರದೇಶದ ಬಡರೈತರಿಗೆ ಅವರು ಉತ್ಪಾದಿಸಿದ ಪ್ರಮಾಣದಷ್ಟು ಗೋಧಿ ಸ್ಥಳೀಯ ಮಾರುಕಟ್ಟೆಯಲ್ಲಿ ಸಿಗುವುದಿಲ್ಲ. ಕಾರಣ ಅದು ಬ್ರೆಡ್ ಬಿಸ್ಕತ್ತುಗಳ ತಯಾರಿಕೆಗಾಗಿ ಉಪಯೋಗವಾಗುತ್ತಿದೆ. ಹೀಗೆ ತಯಾರಾದ ಬಿಸ್ಕತ್ತುಗಳನ್ನು ಕೊಳ್ಳಲು ಶ್ರೀಮಂತರಿಗಲ್ಲದೆ ಬಡವರಿಗೆ ಸಾಮರ್ಥ್ಯ ಇಲ್ಲವೆಂದು ನಮಗೆಲ್ಲಾ ಗೊತ್ತಿರುವ ವಿಚಾರ. ಈ ದುಬಾರಿ ಆಹಾರ ವಸ್ತುಗಳು ಮಾತ್ರ ಪ್ರತಿಷ್ಠಿತ ಮೇಲು ವರ್ಗದ ಜನರಿಗಾಗಿ ಉಪಯೋಗವಾಗುತ್ತದೆ. ಇನ್ನೊಂದು ಉದಾಹರಣೆ, ಹಳ್ಳಿಯಲ್ಲಿ ಉತ್ಪತ್ತಿಯಾದ ಹಾಲನ್ನು ಮತ್ತು ಅದರಿಂದ ತಯಾರಾಗುವ ಇತರ ವಸ್ತುಗಳನ್ನು ಅಲ್ಲಿನ ಜನರೇ ಉಪಯೋಗಿಸುತ್ತಿದ್ದರು. ಅದರಿಂದ ಉತ್ಪತ್ತಿಯಾದ ಬೆಣ್ಣೆ ಹೊರಗೆ ಹೋಗುತ್ತಿದ್ದುದಾದರೂ ಉಳಿದ

ಮಜ್ಜಿಗೆ ಅಲ್ಲಿನ ಜನರಿಗೇ ಸಿಗುತ್ತಿತ್ತು. ಈಗ ಹಾಲೆಲ್ಲವೂ ಪಟ್ಟಣದ ಪೇಟೆಗೆ ಹೋಗುವುದರಿಂದ ಅಲ್ಲಿ ಅದನ್ನು ಶೀತೀಕರಿಸಿ ಹಾಲುಪುಡಿ ಮತ್ತು ಐಸ್‌ಕ್ರೀಮ್ ಮುಂತಾದ ವಸ್ತುಗಳನ್ನು ತಯಾರಿಸುತ್ತಾರೆ. ಹಳ್ಳಿಯ ಬಡವರು ಹಾಲು ಉತ್ಪತ್ತಿ ಮಾಡಿದವರು ಹೀಗೆ ತಯಾರಾದ ಪೌಷ್ಟಿಕ ಆಹಾರವನ್ನು ಕೊಳ್ಳಲು ಖಂಡಿತಾ ಅಸಮರ್ಥರಾಗಿರುತ್ತಾರೆ. ಅವರಿಗೆ ಸಿಗುತ್ತಿದ್ದ ಹಾಲು. ಮಜ್ಜಿಗೆಯೂ ಸಿಗದ ಹಾಗಾಯಿತು. ಅಂದರೆ ಅವರಿಗೆ ಸಿಗುವ ಆಹಾರದ ಪ್ರಮಾಣ ಮತ್ತು ಗುಣ ಮಟ್ಟ ಎರಡೂ ಕಡಿಮೆಯಾದಂತಾಯಿತು.

ಇಲ್ಲಿನ ಶ್ರೀಮಂತರಿಗೆ ಯಾವ ಆಹಾರ ಕೊರತೆಯೂ ಇಲ್ಲ, ಬದಲು ಕೈಗಾರಿಕೆಯಲ್ಲಿ ಮುಂದುವರಿದ ರಾಷ್ಟ್ರಗಳಲ್ಲಿನ ಶ್ರೀಮಂತ ವರ್ಗ ಮತ್ತು ಸಂಪತ್ತುಳ್ಳ ಜನರು ಜಾಸ್ತಿ ತಿನ್ನುವುದರಿಂದ ಬರುವ ಖಾಯಿಲೆಗಳೇ ಇಲ್ಲಿನ ಶ್ರೀಮಂತ ಜನರನ್ನೂ ಕಾಡುತ್ತಿವೆ. ಅನ್ನಾಂಗಗಳ ಕೊರತೆ, ಪೌಷ್ಟಿಕತೆ ಇಲ್ಲದಿರುವುದು, ಹಸಿವು ಮತ್ತು ಉಪವಾಸಗಳಿಂದ ನರಳುವರು ಸಾಮಾನ್ಯವಾಗಿ ಆರ್ಥಿಕವಾಗಿ ತೀರಾ ಕೆಳ ಹಂತದಲ್ಲಿರುವವರು. ಬಡವರಂತೂ ಇದರಿಂದ ತೀರಾ ತೊಂದರೆಗೊಳಗಾಗುತ್ತಿದ್ದಾರೆ. ಡೆಕ್ಕನ್ ಹೆರಾಲ್ಡ್ (೨೫ ಜನವರಿ ೧೯೭೫)ರ ಪ್ರಕಾರ ಪಶ್ಚಿಮ ಬಂಗಾಳದ ಕೃಷಿ ಕೆಲಸಗಾರರು ಬೇಯಿಸಿದ ಗೋಧಿ ಮತ್ತು ಒಂದು ಚೂರು ಉಪ್ಪನ್ನು ದಿನಕ್ಕೆ ಒಂದು ಹೊತ್ತು ಮಾತ್ರ ತಿಂದು ಜೀವಿಸುತ್ತಿದ್ದಾರೆ. ಅವರಿಗೆ ಕೆಲಸದ ಅವಕಾಶಗಳು ಇಲ್ಲದಿರುವುದು ಈ ಬಡತನಕ್ಕೆ ಕಾರಣವಾಗಿದೆ ಎಂದು ತಿಳಿಸುತ್ತದೆ. ಹಳ್ಳಿಯ ಬಡತನ ಜಾಸ್ತಿಯಾಗುತ್ತಾ ಇದೆ. ಅಲ್ಲೂ ಆರ್ಥಿಕವಾಗಿ ಕೆಳ ಹಂತದಲ್ಲಿರುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಒಟ್ಟಿನಲ್ಲಿ ಆಹಾರ ಸಮಸ್ಯೆಯು ಶ್ರೀಮಂತರನ್ನು ಕಾಡದೆ ಕೇವಲ ಬಡವರನ್ನು ಎಲ್ಲಾ ರೀತಿಯಿಂದಲೂ ಕಾಡುತ್ತಿದೆ.

ಭಾರತ ಕಳೆದ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ತನ್ನ ಆಹಾರದ ಉತ್ಪಾದನೆಯನ್ನು ಹೆಚ್ಚು ಕಡಿಮೆ ಎರಡು ಪಟ್ಟು ಹೆಚ್ಚಿಸಿಕೊಂಡಿದೆ, ನಮ್ಮ ನೆರೆಯ ಅನೇಕ ಸಮಾಜವಾದೀ ದೇಶಗಳಲ್ಲೂ ಈ ಅವಧಿಯಲ್ಲಿ ಉತ್ಪಾದನೆ ಹೆಚ್ಚು ಕಡಿಮೆ ಎರಡು ಪಟ್ಟೇ ಜಾಸ್ತಿಯಾಗಿರುವುದು. ಅಲ್ಲಿ ಆಹಾರ ಸಮಸ್ಯೆಗಳು ಇಲ್ಲಿಯಷ್ಟು ತೀವ್ರತರವಾಗಿಲ್ಲದಿರುವುದರಿಂದ, ಇಲ್ಲಿಯೂ ಅಂಥ ಸಮಾನ ವಿತರಣೆ ಪದ್ಧತಿಯಿಂದ ಸಮಸ್ಯೆಯನ್ನು ಬಗೆ ಹರಿಸಲು ಸಾಧ್ಯವೇ ಎಂಬುದು ತೀವ್ರವಾಗಿ ಯೋಚಿಸಬೇಕಾದ ವಿಷಯ.

ಒಟ್ಟಿನಲ್ಲಿ ಆಹಾರ ಸಮಸ್ಯೆಯನ್ನು ಹುಟ್ಟಿಸುವಂಥ 'ಅಧಿಕ ಜನಸಂಖ್ಯೆ' ಏನೂ ಇಲ್ಲ. ಅಥವಾ ಬಡತನವನ್ನುಂಟು ಮಾಡುವ ಬೃಹತ್ ಜನಸಂಖ್ಯೆಯೂ ಇಲ್ಲ ಅನ್ನುವುದು ಸ್ಪಷ್ಟವಾಗುತ್ತದೆ. ಇಲ್ಲಿನ ಬೃಹತ್ ಜನಸಂಖ್ಯೆಯೇ ಆಹಾರದ

ಎಲ್ಲಾ ಸಮಸ್ಯೆಗಳಿಗೂ ಕಾರಣ ಎನ್ನುವ ವಾದ ಹುರುಳಿಲ್ಲದ್ದು. ಇಲ್ಲಿರುವ ಬಡವರು ದಿನೇ ದಿನೇ ಬಡವರಾಗುತ್ತಿದ್ದು, ಶ್ರೀಮಂತರೂ ದಿನೇ ದಿನೇ ಇನ್ನೂ ಶ್ರೀಮಂತರಾಗುತ್ತಿರುವ, ಲಾಭ ಗಳಿಸುವುದೇ ಗುರಿಯಾಗಿರುವ, ಶೋಷಣೆಯ ಸಾಮಾಜಿಕ ಆರ್ಥಿಕ ಪರಿಸ್ಥಿತಿಯಿಂದ. ಇಂಥ ಆಹಾರ ಸಮಸ್ಯೆಗಳು ಪ್ರಬಲವಾಗುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಜನರ ಆಹಾರದ ಕೊರತೆಯ ಸಮಸ್ಯೆಗಳಾಗಲೀ, ಬಡತನವಾಗಲೀ, ಆಯಾ ಸಾಮಾಜಿಕ-ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಬೇರು ಬಿಟ್ಟಿವೆ. ಆದ್ದರಿಂದ ದ್ರುತಿಷ್ಠಿತ ವರ್ಗ ತಯಾರಿಸುವ ಟೆಕ್ನಾಲಜಿಯಿಂದಾಗಲೀ ಅಥವಾ ದಕ್ಷ ಆಡಳಿತದಿಂದಾಗಲೀ ಅವುಗಳನ್ನು ನಿವಾರಿಸುವುದು ಸಾಧ್ಯವಿಲ್ಲ. ಈ ಸಾಮಾಜಿಕ-ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಮೂಲಭೂತ ಬದಲಾವಣೆಗಳಾಗಿ, ಅವುಗಳ ಒಳ ಹೊರ ರೂಪಗಳು ಬದಲಾದಾಗ ಮಾತ್ರ ಸಾಧ್ಯ ಆಗುತ್ತದೆ ಅನ್ನುವುದು ಸತ್ಯದ ಸಂಗತಿ. ★

-ಒಡನಾಡಿ ಸಾಭಾರ

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ ಹೊಸ ಶತಮಾನದ, ಹೊಸ ಸಹಸ್ರಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/-ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖಬೆಲೆ ೧೦/-ರೂ. ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಮ್ರ ಕೋರಿಕೆ. -ಪ್ರಕಾಶಕರು,

೧೯೪೨ರಲ್ಲಿ ಕ್ವಿಟ್ ಇಂಡಿಯಾ;
೧೯೭೨ರಲ್ಲಿ ಸಂಪೂರ್ಣಕ್ರಾಂತಿ!

ಲೇ : ಸುರೇಂದ್ರ ಕೌಲಗಿ

ಇಂದಿಗೆ ೬೦ ವರ್ಷಗಳ ಹಿಂದೆ ಮಹಾತ್ಮಾ ಗಾಂಧೀ ಇಂಗ್ಲಿಷರ ವಿರುದ್ಧ "ಕ್ವಿಟ್ ಇಂಡಿಯಾ" ಎಂಬ ಕರೆ ನೀಡಿದರು. ಆ ಕರೆಯು ಮೇರೆಗೆ ದೇಶದಾದ್ಯಂತ ಬಿರುಸಾದ ಚಳುವಳಿ ನಡೆಯಿತು. ದೇಶದ ಎಲ್ಲ ನಾಯಕರು ಈ ಚಳುವಳಿಯಲ್ಲಿ ಭಾಗವಹಿಸಿ ಸೆರೆವಾಸವಾಸ ಅನುಭವಿಸಿದರು. ಜನ ಸಾಮಾನ್ಯರೂ ಸಹ ಈ ಚಳುವಳಿಯಲ್ಲಿ ಭಾಗವಹಿಸಿ ತಮ್ಮ ಬಂಧುಗಳನ್ನೂ ಮನೆಮಠಗಳನ್ನೂ ಕಳೆದು ಕೊಂಡರು. ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಈ ಕೊನೆಯ ಹೋರಾಟ ನಿರ್ಣಾಯಕವಾಯಿತು. ಮುಂದೆ ಐದು ವರ್ಷಗಳ ನಂತರ ೧೯೪೭ ರಲ್ಲಿ ಇಂಗ್ಲಿಷರು ಭಾರತಕ್ಕೆ ಸ್ವಾತಂತ್ರ್ಯ ಕೊಟ್ಟು ದೇಶ ಬಿಟ್ಟುಹೋದರು. ಗಾಂಧೀಜಿಯವರು ಹೂಡಿದ್ದ ಈ "ಕ್ವಿಟ್ ಇಂಡಿಯಾ" ಚಳುವಳಿ ಕೇವಲ ಸ್ವಾತಂತ್ರ್ಯ ಪಡೆಯುವ ಚಳುವಳಿಯಾಗಿದ್ದಿರದೆ ಭಾರತಿಯರನ್ನು ಸ್ವತಂತ್ರ ಭಾರತದ ಸಮರ್ಥ ಪ್ರಜೆಗಳನ್ನಾಗಿ ಮಾಡುವ ಉದ್ದೇಶವನ್ನೂ ಹೊಂದಿತ್ತು. ಆದಕ್ಕಾಗಿ ಗಾಂಧೀಜಿ ಆ ಚಳುವಳಿಯೊಂದಿಗೆ ಅನೇಕ ಸಾಮಾಜಿಕ ಕಾರ್ಯಕ್ರಮ ಗಳನ್ನೂ ಸೇರಿಸಿದ್ದರು. ಅಲ್ಲದೆ ಈ ರಾಷ್ಟ್ರೀಯ ಚಳುವಳಿಯನ್ನು ಹೂಡುವಾಗ ಗಾಂಧೀಜಿ ಈ ಮಾತನ್ನು ಹೇಳಿದ್ದರು. "ನಾನು ಬ್ರಿಟಿಷರ ವಿರೋಧಿಯಲ್ಲ; ಯಾವುದೇ ಸರ್ಕಾರದ ವಿರೋಧಿಯೂ ಅಲ್ಲ; ನಾನು ಅಸತ್ಯದ ವಿರೋಧಿ; ಮೋಸ ಕಪಟಗಳ ವಿರೋಧಿ ಅನ್ಯಾಯದ ವಿರೋಧಿ. ಸರ್ಕಾರ ಎಲ್ಲಿಯವರೆಗೆ ಅನ್ಯಾಯ ದಲ್ಲಿ ತೊಡಗಿರುತ್ತದೋ ಅಲ್ಲಿಯವರೆಗೆ ಅದು ನನ್ನನ್ನು ತನ್ನ ವೈರಿಯೆಂದು ಭಾವಿಸಬಹುದು, ಸಮಾಧಾನ ಪಡಿಸಲಾಗದ ವೈರಿಯೆಂದು ತಿಳಿಯಬಹುದು'

"ಕ್ವಿಟ್ ಇಂಡಿಯಾ" ಚಳುವಳಿಯನ್ನು ಪ್ರಾರಂಭಿಸುವ ಮೊದಲು ಇಂಗ್ಲಿಷರ ಸಾಮ್ರಾಜ್ಯ ಭಾರತದ ಮಟ್ಟಿಗೆ ಯಾವ ರೀತಿ ಇದೆ ಎಂಬುದನ್ನು ಸಹ ಗಾಂಧೀಜಿ ಸಾರಿದ್ದರು, ಅಗ ಗಾಂಧೀಜಿ ಹೇಳಿದ್ದೇನೆಂದರೆ :—

- ಗ್ರೇಟ್ ಬ್ರಿಟನ್ನಿನ ಹಿತಕ್ಕಾಗಿ ಭಾರತದ ಸಂಪನ್ಮೂಲಗಳ ಲೂಟಿ ನಡೆಯುತ್ತಿದೆ.
- ಸದಾ ಕಾಲ ಏರುತ್ತಿರುವ ಸೈನಿಕ ವೆಚ್ಚ ಹಾಗೂ ನಾಗರಿಕ ಆಡಳಿತ ವೆಚ್ಚ. ಈ ವೆಚ್ಚ ಪ್ರಪಂಚದಲ್ಲಿಯೇ ಅತ್ಯಂತ ದುಬಾರಿಯಾಗಿದೆ;
- ಭಾರತದಲ್ಲಿರುವ ಬಡತನವನ್ನು ನಿರ್ಲಕ್ಷಿಸಿ ಪ್ರತಿಯೊಂದು ಇಲಾಖೆ ಯಲ್ಲಿ ದುಂದುವೆಚ್ಚ ನಡೆದಿದೆ;

ಭಾರತೀಯರನ್ನು ಸಂಪೂರ್ಣವಾಗಿ ನಿಶ್ಶಸ್ತ್ರೀಕರಣಗೊಳಿಸಿ, ಅವರನ್ನು ನಪುಂಸಕರನ್ನಾಗಿ ಮಾಡಲಾಗಿದೆ;

- ಆಡಳಿತದ ಅತಿ ಭಾರದ ವೆಚ್ಚವನ್ನು ಸರಿದೂಗಿಸಲು ಹೆಂಡ ಮತ್ತು ಮಾದಕ ವಸ್ತುಗಳ ಮಾರಾಟ ನಡೆದಿದೆ;
- ರಾಷ್ಟ್ರ ಅನುಭವಿಸುತ್ತಿರುವ ನೋವನ್ನು ವ್ಯಕ್ತಪಡಿಸಲು ನಡೆಯುತ್ತಿರುವ ನಿರಂತರ ಹೋರಾಟವನ್ನು ಹತ್ತಿಕ್ಕಲು ಉಗ್ರ ರೂಪದ ಶಾಸನಗಳು ಜಾರಿಯಲ್ಲಿವೆ.

ಮೇಲ್ಕಾಣಿಸಿದ ಕಾರಣಗಳ ಹಿನ್ನೆಲೆಯಲ್ಲಿ "ಕ್ವಿಟ್ ಇಂಡಿಯಾ" ಚಳುವಳಿಯನ್ನು ಹೂಡಲಾಗಿದೆ ಎಂದು ಗಾಂಧೀಜಿ ಹೇಳಿದ್ದರು.

ಇದೇ ವಿಷಯವಾಗಿ ಗಾಂಧೀಜಿ ಮುಂದುವರಿಯುತ್ತಾ, "ಸ್ವರಾಜ್ಯವು ಭಾರತದ ಜನ್ಮಸಿದ್ಧ ಹಕ್ಕು. ಆದರೆ ಬ್ರಿಟಿಷರ ಆಡಳಿತ ಅಡ್ಡಿಯಾಗಿದೆ, ನನ್ನ ಮಟ್ಟಿಗೆ ಸ್ವರಾಜ್ಯವೆಂದರೆ ನಮ್ಮ ದೇಶದ ಅತ್ಯಂತ ದೀನನಿಗೂ ದೊರೆಯಬೇಕಾದ ಸ್ವಾತಂತ್ರ್ಯ. ಯಾವುದೇ ಪ್ರಕಾರದ ದಾಸ್ಯದ ನೊಗವಿರಲಿ ಅದನ್ನು ಕಿತ್ತು ಹಾಕಲು ನಾನು ಕಂಕಣಬದ್ಧನಾಗಿದ್ದೇನೆ. ಬಿಳಿಯರನ್ನು ಕಳುಹಿಸಿ ಕರಿಯರನ್ನು ತಂದು ಕೂಡಿಸುವುದರಲ್ಲಿ ನನಗೆ ಆಸಕ್ತಿಯಿಲ್ಲ. ಇಂದು ವಿಶ್ವಕ್ಕೆ ಹೆಚ್ಚಾಗುತ್ತಿರುವ ಕಾಟವೇನೆಂದರೆ ಭಾರತವನ್ನು ಗುಲಾಮ ದೇಶವನ್ನಾಗಿ ಮಾಡಿ ವಿಶ್ವದ ಇತರೆ ದುರ್ಬಲ ಜನಾಂಗಗಳನ್ನು ಶೋಷಿಸುತ್ತಿರುವ ಬಂಡವಾಳಶಾಹಿ; ದೇವರ ಹೆಸರಿನಲ್ಲಿ ಸೈತಾನ ಕೆಲಸ ಮಾಡುತ್ತಿದೆ. ಅದು ತನ್ನ ಅಮಾನವೀಯ ಕೃತ್ಯಗಳನ್ನೂ, ಡ್ವೈಯರ್ ಸಿದ್ಧಾಂತವನ್ನೂ ಮಾನವೀಯತೆ, ನ್ಯಾಯ ಮತ್ತು ಸನ್ನಡತೆಯ ಹೆಸರಿನಲ್ಲಿ ಮುಚ್ಚಿಹಾಕುತ್ತಿದೆ." ಎಂದು ಹೇಳಿದರು.

"ನನ್ನ ಇಚ್ಛೆ ಸ್ವಾತಂತ್ರ್ಯ ಬೇಕು ಎನ್ನುವುದನ್ನೂ ಮೀರಿ ಭಾರತದ ಬಿಡುಗಡೆಯ ಮೂಲಕ ಈ ಪ್ರಪಂಚದಲ್ಲಿ ಪಾಶ್ಚಿಮಾತ್ಯರಿಂದ ಶೋಷಿತವಾಗುತ್ತಿರುವ ಎಲ್ಲ ಜನಾಂಗಗಳ ಬಿಡುಗಡೆಯಾಗಬೇಕೆಂಬುದಾಗಿದೆ."

ಕ್ವಿಟ್ ಇಂಡಿಯಾ ಚಳುವಳಿಯ ಅಂಗವಾಗಿ ಗಾಂಧೀಜಿ ಪ್ರಾರಂಭಿಸಿದ "ಕರ ನಿರಾಕರಣೆ ಆಂದೋಲನ", "ಅಸಹಕಾರ ಆಂದೋಲನ". "ವಿದೇಶಿ ವಸ್ತುಗಳ ಬಹಿಷ್ಕಾರ ಆಂದೋಲನ", "ಉಪ್ಪಿನ ಸತ್ಯಾಗ್ರಹ", "ಬ್ರಿಟಿಷ್ ವಿದ್ಯಾಸಂಸ್ಥೆಗಳ ಬಹಿಷ್ಕಾರ", ಹಿಂದು-ಮುಸ್ಲಿಂ ಐಕ್ಯತಾ ಕಾರ್ಯಕ್ರಮ, ಅಸ್ಪೃಶ್ಯತಾ ನಿವಾರಣಾ ಆಂದೋಲನ ಮುಂತಾದವುಗಳು ಭಾರತೀಯರಲ್ಲಿ ಸ್ವಾಭಿಮಾನ ಮತ್ತು ಧೈರ್ಯ ತುಂಬುವ ಕೆಲಸ ಮಾಡಿದವು.

ಸ್ವಾತಂತ್ರ್ಯ ಬಂದ ಮೇಲೆ ಪ್ರಜಾಪ್ರತಿನಿಧಿಗಳು, ಮಂತ್ರಿಗಳು ಬಹಳ ಸರಳ ಜೀವನ ನಡೆಸಬೇಕೆಂದು ಗಾಂಧೀಜಿ ಹೇಳಿದ್ದರು. ಅವರು ತಿಂಗಳಿಗೆ ೫೦೦/- ರೂಪಾಯಿ ಮಾತ್ರ ಗೌರವಧನ ಪಡೆಯಬೇಕೆಂದು ಹೇಳಿದ್ದರು. ರಾಷ್ಟ್ರಪತಿಭವನ ಸಾರ್ವಜನಿಕ ಆಸ್ಪತ್ರೆಯಾಗಬೇಕೆಂದು ಸೂಚಿಸಿದ್ದರು. ಭಾರತೀಯರು ತಮ್ಮ ಸಾರ್ವಜನಿಕ ಜೀವನದಲ್ಲಿ ಸತ್ಯ ಮತ್ತು ಅಹಿಂಸೆಯನ್ನು ಮೌಲ್ಯವಾಗಿಟ್ಟು ಕೊಳ್ಳಬೇಕೆಂದು ಹೇಳಿದರು. ರಾಜಕೀಯ ಪಕ್ಷಗಳು, ಮುಖ್ಯವಾಗಿ ಕಾಂಗ್ರೆಸ್ ಪಕ್ಷ, ಲೋಕ ಸೇವಕ ಸಂಘಗಳಾಗಬೇಕೆಂದು ಹೇಳಿದ್ದರು.

ಗಾಂಧೀಜಿಯವರು ೧೯೪೨ರಲ್ಲಿ "ಕ್ವಿಟ್ ಇಂಡಿಯಾ" ಚಳುವಳಿಯ ಸಂದರ್ಭದಲ್ಲಿ ೬೦ ವರ್ಷಗಳ ಹಿಂದೆ ಹೇಳಿದ್ದ ಮಾತುಗಳು ಮತ್ತು ವಿಚಾರಗಳು ಇಂದಿನ ಕಾಲದಲ್ಲೂ ಪ್ರಸ್ತುತವಾಗಿವೆ ಎಂದು ತೆರೆದ ಮನಸ್ಸಿನ ಯಾವುದೇ ಭಾರತೀಯರಿಗೆ ಅನಿಸದೇ ಇರಲಾರದು.

ಗಾಂಧೀಜಿಯವರ ಈ ಕನಸುಗಳನ್ನು ತಮ್ಮ ತನುಮನದಲ್ಲಿ ಮತ್ತು ಕಣ್ಣಲ್ಲಿ ತುಂಬಿಕೊಂಡಿದ್ದ ಜಯಪ್ರಕಾಶ ನಾರಾಯಣರು ಕ್ವಿಟ್ ಇಂಡಿಯಾ ಚಳುವಳಿಯ ನಂತರ ಮೂವತ್ತು ಮೂರು ವರ್ಷಗಳ ತರುವಾಯ ೧೯೭೫ರಲ್ಲಿ "ಸಂಪೂರ್ಣಕ್ರಾಂತಿ" ಎಂಬ ಚಳುವಳಿಯನ್ನು ಪ್ರಾರಂಭಿಸಿದರು. ಮತ್ತು ಗಾಂಧೀಜಿಯವರು ಬಯಸಿದ್ದ ಪೂರ್ಣ ಸ್ವರಾಜ್ಯದ ವಿಚಾರಗಳನ್ನು ಸಾಕಾರಗೊಳಿಸಲು ತಮ್ಮ ಪ್ರಾಣವನ್ನೇ ಅರ್ಪಿಸಿದರು. ೧೯೭೫ ರಲ್ಲಿ ಜಯಪ್ರಕಾಶ್ ನಾರಾಯಣರು ಯಾವ ಉದ್ದೇಶ್ಯಗಳಿಂದ "ಸಂಪೂರ್ಣಕ್ರಾಂತಿ"ಯನ್ನು ಪ್ರಾರಂಭಿಸಿದರೋ. ಯಾವ ವಿಚಾರಗಳಿಗಾಗಿ ಪ್ರಾರಂಭಿಸಿದರೋ ಅವೆಲ್ಲವೂ ಸಂಪೂರ್ಣ ಕ್ರಾಂತಿಯ ೧೭ ವರ್ಷಗಳ ನಂತರ ೧೯೯೨ರಲ್ಲಿಯೂ ಪ್ರಸ್ತುತವಾಗಿವೆ.

೧೯೪೨ರ ಗಾಂಧೀಜಿಯವರ 'ಕ್ವಿಟ್ ಇಂಡಿಯಾ' ಚಳುವಳಿಯ ಚಾಲನೆಗೆ ಇದ್ದ ಕಾರಣಗಳಂಥವೇ ಹೆಚ್ಚು-ಕಡಿಮೆ ಜಯಪ್ರಕಾಶರ "ಸಂಪೂರ್ಣಕ್ರಾಂತಿಯ" ಚಾಲನೆಗೂ ಇದ್ದವೆಂಬುದು ಗಮನಾರ್ಹವಾಗಿದೆ. ಗಾಂಧೀಜಿಯವರ ಕ್ವಿಟ್ ಇಂಡಿಯಾ ಚಳುವಳಿಯು ಅಧಿಕಾರದ ದುರುಪಯೋಗದ ವಿರುದ್ಧ ಹೂಡಲ್ಪಟ್ಟಿದ್ದರೆ ಜಯಪ್ರಕಾಶರ ಸಂಪೂರ್ಣಕ್ರಾಂತಿಯೂ ಸಹ ಅಧಿಕಾರದ ದುರುಪಯೋಗದ ವಿರುದ್ಧವೇ ಹೂಡಲ್ಪಟ್ಟಿತ್ತು. ಗಾಂಧೀಜಿಯವರು ರಾಜಕಾರಣವನ್ನು ಆಧ್ಯಾತ್ಮೀಕರಣಗೊಳಿಸಲು ಪ್ರಯತ್ನಿಸಿದ್ದರು. ಜಯಪ್ರಕಾಶರು ಸಹ ಅಧಿಕಾರವ ಸ್ಥಾನಗಳಿಂದ ದೂರ ಇರುವುದರ ಮೂಲಕ ಮತ್ತು "ಸರ್ವೋದಯ" ವಿಚಾರಕ್ಕೆ ತಮ್ಮ ಜೀವನವನ್ನು ದಾನವಾಗಿ ಕೊಡುವುದರ ಮೂಲಕ ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣವನ್ನು ಆಧ್ಯಾತ್ಮೀಕರಣ ಗೊಳಿಸಲು ಪ್ರಯತ್ನಿಸಿದರು. ಗಾಂಧೀಜಿಯವರು ಪರಿಶುದ್ಧ ರಾಜ

ಕಾರಣರಾಗಿ ಒತ್ತಾಯಿಸಿದ್ದರು. ಅದೇ ರೀತಿ ಜಯಪ್ರಕಾಶರೂ ತಮ್ಮ "ಸಂಪೂರ್ಣಕ್ರಾಂತಿ"ಯ ಮೂಲಕ ಭ್ರಷ್ಟಾಚಾರದ ವಿರುದ್ಧ ಸಮರ ಸಾರಿದರು. ಗಾಂಧೀಜಿ ಕ್ವಿಟ್ ಇಂಡಿಯಾದಂಥ ಉಗ್ರ ಚಳುವಳಿಯ ಜೊತೆಯಲ್ಲಿಯೇ ಸತ್ಯ ಮತ್ತು ಅಹಿಂಸೆಯ ಆಧಾರವಾಗಿದ್ದಂಥ ೨೦ ಪ್ರಕಾರದ ರಚನಾತ್ಮಕ ಕಾರ್ಯಗಳನ್ನು ಜೋಡಿಸಿದ್ದರು. ಏಕೆಂದರೆ ಗಾಂಧೀಜಿಯವರ ದೃಷ್ಟಿಯಲ್ಲಿ ಭಾರತದ ಸ್ವಾತಂತ್ರ್ಯ ಕೇವಲ ರಾಜಕೀಯ ಸ್ವಾತಂತ್ರ್ಯವಾಗಿದ್ದಿರದೆ ಅದು 'ಪೂರ್ಣ ಪ್ರಮಾಣದ ಸ್ವರಾಜ್ಯ"ವಾಗಿರಬೇಕೆಂದು ಬಯಸಿದ್ದರು. ಅದೇ ದೃಷ್ಟಿಯನ್ನು ಹೊಂದಿದ್ದ ಜಯಪ್ರಕಾಶ ನಾರಾಯಣರು ತಮ್ಮ ರಾಜಕೀಯ ಕ್ರಾಂತಿಯನ್ನು ಒಂದು ಸರಕಾರವನ್ನು ಉರುಳಿಸಿ ಅದರ ಸ್ಥಾನಕ್ಕೆ ಇನ್ನೊಂದು ಸರಕಾರವನ್ನು ತರುವಂಥ ಉದ್ದೇಶ್ಯಕ್ಕೆ ಸೀಮಿತಗೊಳಿಸದೆ ಅಂದರೆ ಸರಕಾರ ಉದ್ದೇಶಿತ ಕ್ರಾಂತಿಯನ್ನಾಗಿಸದೇ ಅದನ್ನು ಇಡೀ ಸಮಾಜದ ಕಾಯಕಲ್ಪವನ್ನು ಬದಲಾಯಿಸುವ ಕ್ರಾಂತಿಯನ್ನಾಗಿ ಅಂದರೆ "ಸಂಪೂರ್ಣಕ್ರಾಂತಿಯನ್ನಾಗಿ ಪ್ರಾರಂಭಿಸಿದರು. ಗಾಂಧೀಜಿಯವರ ೨೦ ಪ್ರಕಾರದ ರಚನಾತ್ಮಕ ಕಾರ್ಯಕ್ರಮಗಳಂತೆಯೇ ಜಯಪ್ರಕಾಶರು ತಮ್ಮ ಸಂಪೂರ್ಣ ಕ್ರಾಂತಿಗೆ ಏಳು ಪ್ರಕಾರದ ಆಯಾಮಗಳನ್ನು ಸೇರಿಸಿದ್ದರು. ಗಾಂಧೀಜಿ. ತಮ್ಮ ಚಳುವಳಿ ಪೂರ್ಣವಾಗಿ ಅಹಿಂಸಾತ್ಮಕವಾಗಿರಬೇಕೆಂದು ಬಯಸಿದ್ದಂತೆಯೇ ಜಯಪ್ರಕಾಶರು ಕೂಡ ತಮ್ಮ ಸಂಪೂರ್ಣಕ್ರಾಂತಿಯನ್ನು ಅಹಿಸಾತ್ಮಕವಾಗಿಯೇ ನಡೆಸಲು ಪ್ರಯತ್ನಿಸಿದರು. ಗಾಂಧೀಜಿ ಚಳುವಳಿಗೆ ವಿದ್ಯಾರ್ಥಿಗಳನ್ನು ಆಹ್ವಾನಿಸಿದಂತೆ ಜಯಪ್ರಕಾಶರೂ ಸಹ ತಮ್ಮ ಚಳುವಳಿಗೆ ವಿದ್ಯಾರ್ಥಿಗಳನ್ನು ಆಹ್ವಾನಿಸಿದರು. ಗಾಂಧೀಜಿಯವರು ಅಲ್ಪಮತ, ಬಹುಮತದ ಪಾಶ್ಚಿಮಾತ್ಯ ರಾಜಕೀಯ ಸೂತ್ರವನ್ನು ಪೂರ್ಣವಾಗಿ ನಿರಾಕರಿಸಿ ಅದರ ಸ್ಥಾನದಲ್ಲಿ ಹೃದಯ ಪರಿವರ್ತನೆಯ ತತ್ವಶಾಸ್ತ್ರವನ್ನು ಸ್ಥಾಪಿಸಲು ಪ್ರಯತ್ನಿಸಿದರು. ಹೃದಯ ಪರಿವರ್ತನೆ ಅಂದರೆ ವಿಚಾರ ಪರಿವರ್ತನೆ. ಹೀಗೆ ಹೃದಯ ಹಾಗೂ ವಿಚಾರಗಳ ಪರಿವರ್ತನೆಯ ಮೂಲಕ ಸಂಘರ್ಷದ ಕಾರಣಗಳನ್ನು ನಿಷ್ಕ್ರಿಯಗೊಳಿಸಬೇಕೆಂಬುದು ಗಾಂಧೀಜಿಯವರ ಮಹತ್ವಾಕಾಂಕ್ಷೆಯಾಗಿತ್ತು. ಅದೇ ರೀತಿಯ ಮಹತ್ವಾಕಾಂಕ್ಷೆಯನ್ನು ಸಾರುತ್ತಾ ಭಾರತದಾದ್ಯಂತ ಸಾಗಿದ್ದ ಆಚಾರ್ಯ ವಿನೋಬಾ ಭಾವೆಯವರ ಸರ್ವಾನುಮತ ಸಿದ್ಧಾಂತದ, ಸರ್ವೋದಯ ವಿಚಾರದ ಪ್ರತಿಪಾದಕರಾಗಿ ಜಯಪ್ರಕಾಶರು ತಮ್ಮ ಜೀವನದ ಕೊನೆಯವರೆಗೂ ಕೆಲಸ ಮಾಡಿದರು. ಅಲ್ಪಮತ ಬಹುಮತದ ಸಿದ್ಧಾಂತ ಇಂದು ನಮ್ಮ ದೇಶದ ರಾಜಕಾರಣವನ್ನು ಕೀಳುಮಟ್ಟಕ್ಕೆ ತಂದು ನಿಲ್ಲಿಸಿದೆ, ಅಮಾನವೀಯವಾಗಿ ಮಾಡಿದೆ ತತ್ವ ರಹಿತವನ್ನಾಗಿ ಮಾಡಿದೆ. ಇಷ್ಟೇ ಅಲ್ಲ ನಮ್ಮ ದೇಶದ ಸಾಮಾಜಿಕ ಜೀವನವನ್ನು ತುಂಡು

ತುಂಡಾಗಿ ಮಾಡಿದೆ. ಕೋಮು ಆಧಾರದ ಮೇಲೆ, ಜಾತಿ ಆಧಾರದ ಮೇಲೆ, ಜಾತಿಗಳ ಆಧಾರದ ಮೇಲೆ, ಭಾಷೆ ಆಧಾರದ ಮೇಲೆ ಅಲ್ಪ ಮತ - ಬಹುಮತವನ್ನು ತೀರ್ಮಾನಿಸುವಂಥ ಹೇಯ ಕೃತ್ಯಕ್ಕೆ ನಮ್ಮ ದೇಶದ ರಾಜಕಾರಣಿಗಳು ತೊಡಗಿದ್ದಾರೆ. ಬ್ರಿಟಿಷರ ಕಾಲದಿಂದ ಪ್ರಾರಂಭವಾದ ಈ ರಾಜಕೀಯ ನೀತಿ ಸ್ವತಂತ್ರ ಭಾರತದ ರಾಜಕಾರಣದಲ್ಲೂ ಮುಂದುವರಿಯಿತು. ಇದರಿಂದ ಉಂಟಾಗ ಬಹುದಾದ ಕೆಡಕುಗಳನ್ನು ಊಹಿಸಿದ್ದ ಗಾಂಧೀಜಿ ಹೃದಯ ಪರಿವರ್ತನೆ ವಿಚಾರ ಪರಿವರ್ತನೆಯಂಥ ಮಾನವೀಯಗುಣಗಳನ್ನು ಸಾರ್ವತ್ರಿಕಗೊಳಿಸಲು ಪ್ರಯತ್ನಿಸಿದರು. ಗಾಂಧೀಜಿಯವರ ಈ ಪ್ರಯತ್ನ ವನ್ನೂ ಜಯಪ್ರಕಾಶರು ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಾದ ಮೂವತ್ತು ಮೂರು ವರ್ಷಗಳ ನಂತರ ಹಾಗೂ ಸ್ವಾತಂತ್ರ್ಯ ಬಂದ್ದು ಇಪ್ಪತ್ತೇಳು ವರ್ಷಗಳ ನಂತತರ ತಮ್ಮ ಸಂಪೂರ್ಣ ಕ್ರಾಂತಿಯ ಮೂಲಕ ಮುಂದುವರಿಸಿದರು.

ಆದ್ದರಿಂದ ೧೯೪೨ರಲ್ಲಿಯ ಮಹಾತ್ಮಾ ಗಾಂಧೀಜಿಯವರ ಕ್ವಿಟ್ ಇಂಡಿಯಾ "ಚಳುವಳಿ ಹಿಂದೆ ಇದ್ದ ವಿಚಾರಗಳು ಮತ್ತು ೧೯೭೪ ರಲ್ಲಿಯ ಲೋಕ ನಾಯಕ ಜಯಪ್ರಕಾಶ ನಾರಾಯಣರ "ಸಂಪೂರ್ಣ ಕ್ರಾಂತ್ರಿಯ ಹಿಂದೆ ಇದ್ದ ವಿಚಾರಗಳು ಈ ೧೯೯೨ರಲ್ಲಿ ಸಂಗಮಗೊಂಡು ಹೊಸರೂಪದ ಕ್ರಾಂತಿಯಾಗಿ ಹೊರಹೊಮ್ಮಲಿಯೆಂದೂ ಮತ್ತು ಆ ಹೊಸ ಕ್ರಾಂತಿಯು ಗಾಂಧೀಜಿ ಹಾಗೂ ಜಯಪ್ರಕಾಶ ಇಬ್ಬರಿಗೂ ಅತ್ಯಂತ ಪ್ರಿಯವಾಗಿದ್ದ ದಂಡಶಕ್ತಿ ಮತ್ತು ರಾಜ್ಯಶಕ್ತಿಗಳ ನಿಯಂತ್ರಕ ಶಕ್ತಿಯಾದ ಲೋಕಶಕ್ತಿಯ ನಿರ್ಮಾಣಕ್ಕೆ ನಾಂದಿಯಾಗಲೆಂದು ಐವತ್ತೈದನೇ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ನಾವೆಲ್ಲರೂ ಹಾರೈಸೋಣ. ★

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿ ಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ಸಂಸದರಿಗೆ ಕೋಟಿ ರೂಪಾಯಿ ರಾಜ್ಯಾಂಗಕ್ಕೆ ಅಪಚಾರ

– ಲೇ : ಇ.ಎಸ್. ವೆಂಕಟರಾಮಯ್ಯ

ಪ್ರತಿಯೊಬ್ಬ ಸಂಸತ್ ಸದಸ್ಯರಿಗೆ ಅವರ ಕ್ಷೇತ್ರದಲ್ಲಿ ಅವರೇ ಆಯ್ದ ಯೋಜನೆಯೊಂದನ್ನು ಅಭಿವೃದ್ಧಿ ಪಡಿಸಲು ಒಂದು ಕೋಟಿ ರೂಪಾಯಿಗಳನ್ನು ನೀಡುವ ನೀತಿಯನ್ನು ಕಾಂಗ್ರೆಸ್ ಸರ್ಕಾರ ರೂಪಿಸಿತು. ಭಾರತದ ಸಂಚಯಿತ ನಿಧಿಯಿಂದ ಒಟ್ಟು ೮೦೦ ಕೋಟಿ ರೂ.ಗಳನ್ನು ಹೀಗೆ ವಿತರಣೆ ಮಾಡಲು ಅಲ್ಪ ಸಂಖ್ಯಾತ ಕಾಂಗ್ರೆಸ್ ಸರ್ಕಾರದ ಹಿಂದಿದ್ದ ಉದ್ದೇಶ ಬಹುಶಃ ಸಂಸದರನ್ನು ತೃಪ್ತರನ್ನಾಗಿಸಿಕೊಳ್ಳುವುದೇ ಆಗಿತ್ತು. ಈಗ ಸಂಯುಕ್ತ ರಂಗ ಸರ್ಕಾರದ ಮೇಲೆ ಸಂಸದರಿಗೆ ೫ ಕೋಟಿ ರೂ.ಗಳನ್ನು ನೀಡುವ ಒತ್ತಡ ಬರುತ್ತಿರುವುದು ಕಾಣುತ್ತಿದೆ. ಇದೇ ರೀತಿಯಲ್ಲಿ ಹಲವು ರಾಜ್ಯ ಸರ್ಕಾರಗಳೂ ಪ್ರತಿ ಶಾಸಕರಿಗೆ ತಮ್ಮ ಕ್ಷೇತ್ರದ ನಿರ್ದಿಷ್ಟ ಯೋಜನೆಗೆ ಖರ್ಚು ಮಾಡಲೆಂದು ೨೦ ರಿಂದ ೫೦ ಲಕ್ಷ ರೂ.ಗಳವರೆಗೂ ನೀಡಲು ಶುರುಮಾಡಿವೆ.

ರಾಜ್ಯಾಂಗದುದ್ದಕ್ಕೂ ಗಣರಾಜ್ಯ ಮನೋಧರ್ಮ ವ್ಯಾಪಿಸಿದೆ. ಆದರೆ ೮೦ಕ್ಕೂ ಹೆಚ್ಚು ಸಂದರ್ಭಗಳಲ್ಲಿ ರಾಜ್ಯಾಂಗದ ೩೫೬ನೇ ವಿಧಿಯ ಅನುಸಾರ ರಾಷ್ಟ್ರಪತಿ ಆಡಳಿತವನ್ನು ಜಾರಿಗೊಳಿಸಿ ಭಾರತವನ್ನು ಸಮಷ್ಟಿ ರಾಜ್ಯಕೂಟವೆಂದು ಕರೆದು ಗಣರಾಜ್ಯ ಮನೋಧರ್ಮವನ್ನು ನಿಷ್ಫಲಗೊಳಿಸಲಾಗಿದೆ. (ರಾಜ್ಯಾಂಗದಲ್ಲಿ ಪ್ರಸ್ತಾಪವನ್ನೇ ಕಾಣದ ಯೋಜನಾ ಆಯೋಗ ರಾಜ್ಯ ಸರ್ಕಾರಗಳ ಹಲವು ಕಾರ್ಯಗಳನ್ನು ತಾನೇ ನಿರ್ವಹಿಸತೊಡಗಿ ಸೂಪರ್ ಮಂತ್ರಿಮಂಡಲದಂತೆ ವರ್ತಿಸತೊಡಗಿದೆ. ಹಾಗಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನಡುವಣ ಗೆರೆ ವಸ್ತುಶಃ ಅಳಿಸಿ ಹೋಗಿದೆ.)

ಒಂದು ರಾಜ್ಯದಲ್ಲಿ ಸಂಸತ್ ಸದಸ್ಯರೊಬ್ಬರು ಅಪೇಕ್ಷೆಪಟ್ಟ ಯೋಜನೆಗೆ ವೆಚ್ಚ ಮಾಡಲು ಹಣ ನೀಡುವುದು ಎಂದರೆ ರಾಜ್ಯಾಂಗದ ವಿಧಿಗಳನ್ನು ಕಡೆಗಣಿಸಿದಂತೆಯೇ ಅಲ್ಲದೆ ರಾಜ್ಯಾಂಗದ ವಿಧಿಗಳ ವಿಚಾರದಲ್ಲಿ ಮಧ್ಯ ಪ್ರವೇಶಿಸಿದ ಹಾಗೆಯೇ ಸರಿ. ಗಣರಾಜ್ಯ ಸ್ವರೂಪದಲ್ಲಿ ಮಧ್ಯಪ್ರವೇಶಿಸಿದ್ದಷ್ಟೇ ಅಲ್ಲದೆ, ಇದರ ಪರಿಣಾಮ ಅಧಿಕಾರ ವಿಭಜನೆಯ ಆರೋಗ್ಯಕರ ಸಂವಿಧಾನಿಕ ತತ್ವದ ಮೇಲೂ ಆಗುತ್ತದೆ.

ಸಂಸತ್ ಸದಸ್ಯರಿಗೆ ವೈಯುಕ್ತಿಕವಾಗಿ ೧೦೫ನೇ ವಿಧಿಯ ಪ್ರಕಾರ ಕೆಲವು ರಾಜ್ಯಾಂಗದತ್ತ ಹಕ್ಕುಬಾಧ್ಯತೆಗಳಿವೆ. ಆದರೆ ಯಾವುದೇ ಅಧಿಕಾರಿಗೆ ಅದರಲ್ಲೂ ರಾಜ್ಯ ಲೋಕಸೇವಾ ಅಧಿಕಾರಿಗೆ ನಿರ್ದೇಶನಗಳನ್ನು ನೀಡುವುದಕ್ಕಾಗಲೀ ಹಣವನ್ನು ವೆಚ್ಚ ಮಾಡುವುದಕ್ಕಾಗಲೀ ಅಧಿಕಾರವಿಲ್ಲ. ಸಂಸತ್ತಿನಲ್ಲಿರು

ವಾಗ ಒಟ್ಟಾಗಿ ಶಾಸನಗಳನ್ನು ಮಾಡುವ, ಕಾರ್ಯಾಂಗವನ್ನು ನಿಯಂತ್ರಿಸುವ ಸಾರ್ವಭೌಮ ಅಧಿಕಾರ ಯಾವುದೇ ಸಂಸದೀಯ ಪ್ರಜಾಸತ್ತೆಯಲ್ಲಿರುವಂತೆ ಅವರಿಗಿದೆ. ವ್ಯಕ್ತಿಗತವಾಗಿ ಅವರು ಉಳಿದೆಲ್ಲ ಪೌರರಂತೆಯೇ ಒಬ್ಬ ಸಾಮಾನ್ಯ ಪ್ರಜೆ. ರಾಜ್ಯಾಂಗ ನೀಡಿರುವ ಹಕ್ಕುಬಾಧ್ಯತೆಯ ವಿಚಾರದಲ್ಲಿ ಮಾತ್ರ ಉಳಿದ ಪೌರರಿಗಿಂತ ಅವರು ಭಿನ್ನ, ಅಷ್ಟೆ.

ಕೇಂದ್ರದಲ್ಲಿಯ ಕಾರ್ಯಾಂಗ ರಾಷ್ಟ್ರಪತಿ ಮತ್ತು ಕೇಂದ್ರ ಸರ್ಕಾರದ ಅಧಿಕಾರಗಳನ್ನು ಹೊಂದಿರುತ್ತದೆ. ಕೇಂದ್ರ ಕಾರ್ಯಾಂಗದ ಅಧಿಕಾರ ರಾಷ್ಟ್ರಪತಿಗಳ ಕೈಯಲ್ಲಿರುತ್ತದೆ. ಈ ಅಧಿಕಾರವನ್ನು ಅವರು ನೇರವಾಗಿಯೇ ಆಗಲಿ ಅಥವಾ ಅವರಿಗೆ ಅಧೀನರಾಗಿರುವ ಅಧಿಕಾರಿಗಳ ಮೂಲಕವೇ ಆಗಲಿ ಚಲಾಯಿಸಬಹುದು. ಆಡಳಿತಾತ್ಮಕವಾದ ಎಲ್ಲ ವಿಚಾರಗಳ ಬಗೆಗೂ ಮಂತ್ರಿಮಂಡಳ ಅವರಿಗೆ ಸಲಹೆ ನೀಡುತ್ತದೆ. ಆದರೆ ಒಬ್ಬ ಸಂಸತ್ ಸದಸ್ಯ ಸ್ವೀಕರಿಸುವ ಪ್ರಮಾಣ ವಚನಕ್ಕೂ ಮಂತ್ರಿಮಂಡಲದ ಪ್ರತಿಜ್ಞಾ ವಿಧಿಗೂ ಅಂತರವಿದೆ. ೨೫೮ನೇ ವಿಧಿಯ ಪ್ರಕಾರ ಕೇಂದ್ರ ಕಾರ್ಯಾಂಗ ವ್ಯಾಪ್ತಿಗೆ ಬರುವ ವಿಚಾರಗಳಲ್ಲಿ ರಾಜ್ಯ ಸರ್ಕಾರಗಳಿಗೆ ಅವುಗಳ ಅನುಮತಿಯ ಮೇರೆಗೆ ಕೆಲವೊಂದು ಕಾರ್ಯಗಳನ್ನು ನಿರ್ವಹಿಸಲು ಸೂಚಿಸುವುದು ಸಾಧ್ಯ.

ಆದರೆ ಸಂಸತ್ ಸದಸ್ಯ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವಂತೆ ಯಾವುದೇ ರಾಜ್ಯ ಸರ್ಕಾರಿ ನೌಕರನಿಗೆ ನಿರ್ದೇಶನ ನೀಡಲು ಅವರು ಕೇಂದ್ರ ಅಥವಾ ರಾಜ್ಯ ಸರ್ಕಾರದ ಅಧಿಕಾರಿಯಲ್ಲ.

ಒಂದು ರಾಜ್ಯದಲ್ಲಿ ಯಾವುದಾದರೂ ಅಭಿವೃದ್ಧಿ ಕಾರ್ಯವಾಗಬೇಕೆಂದು ಕೇಂದ್ರ ಸರ್ಕಾರ ಅಪೇಕ್ಷೆ ಪಟ್ಟಲ್ಲಿ ಅದು ಹಾಗೆಂದು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿ ಅಭಿವೃದ್ಧಿ ಕಾರ್ಯದ ವೆಚ್ಚವನ್ನು ಸಂಚಯಿತ ನಿಧಿಯಿಂದ ಪಡೆಯುವಂತೆ ಹೇಳಬಹುದು. ಆಗಲೂ ಕೂಡಾ ರಾಜ್ಯಸರ್ಕಾರದ ಸಮ್ಮತಿ ಅಗತ್ಯ.

ಹೀಗಿರುವಾಗ, ಕೇಂದ್ರದಲ್ಲಿಯ ಕಾರ್ಯಾಂಗ ವ್ಯಾಪ್ತಿಯಲ್ಲಿರುವ ವಿವೇಚನಾ ಅಧಿಕಾರವನ್ನು ಸಂಸತ್ ಸದಸ್ಯರಿಗೆ ವ್ಯಕ್ತಿಗತವಾಗಿ ಚಲಾಯಿಸಲು ಅವಕಾಶ ನೀಡುವುದು ಸಂಪೂರ್ಣವಾಗಿ ರಾಜ್ಯಾಂಗ ಬಾಹಿರವಾದದ್ದು. ಇಂಥ ವಿಚಾರದಲ್ಲಿ ಸಂಸತ್ ಸದಸ್ಯರು ಒಟ್ಟಾಗಿ ಅಥವಾ ಸಮಷ್ಟಿರೂಪದಲ್ಲಿ ಕಾರ್ಯ ನಿರ್ವಹಿಸಬಹುದೇ ಹೊರತು ಒಬ್ಬ ವ್ಯಕ್ತಿಯಾಗಿ ಅಲ್ಲ. ಸಂಸತ್ತಿನ ಪರಾಮರ್ಶೆಯನ್ನೂ ಮೀರಿ ಐದು ಕೋಟಿ ರೂ ಗಳನ್ನು ಸಂಸತ್ ಸದಸ್ಯನು ಗುರುತಿಸಿದ ಯೋಜನೆಗೆ ವೆಚ್ಚ ಮಾಡುವುದು ಪಾರ್ಲಿಮೆಂಟರಿ ಪ್ರಜಾಸತ್ತೆಯ ತತ್ವಕ್ಕೇ ವಿರುದ್ಧವಾದುದು.

ಈಗ ಯೋಜನೆಯಡಿಯಲ್ಲಿ ವೆಚ್ಚವಾಗುವ ೮೦೦ ಕೋಟಿ ರೂ.ಗಳು ಸಂಸತ್ತಿನ ಪರಾಮರ್ಶೆಗೆ ಒಳಪಡುವುದಿಲ್ಲ. ಅಂಥ ವೆಚ್ಚ ಮಾಡುವ ಸಂಸದನಿಗೆ ಯಾವ ಪ್ರಶ್ನೆಯನ್ನೂ ಕೇಳುವಂತಿಲ್ಲ. ಆತ ಸಚಿವನಾಗಿಲ್ಲದಿದ್ದರೆ ಸದಸ್ಯ ಸಂಸತ್ತಿನಲ್ಲಿ ತನ್ನ ವೆಚ್ಚವನ್ನು ಸಮರ್ಥಿಸಿಕೊಳ್ಳಬೇಕಾದ ಅಗತ್ಯವೂ ಇಲ್ಲ.

ಇಂಥ ವೆಚ್ಚದ ಬಗ್ಗೆ ರಾಜ್ಯ ಶಾಸನ ಸಭೆಗಳೂ ಪ್ರಶ್ನೆ ಎತ್ತುವಂತಿಲ್ಲ. ಈ ವಿಷಯದಲ್ಲಿ ರಾಜ್ಯ ಸರ್ಕಾರ ಕೂಡಾ ಅಸಹಾಯಕ ಇರುವಂತೆ ತೋರುತ್ತದೆ. ಸಂಸತ್ ಸದಸ್ಯರು ಈ ವೆಚ್ಚದ ಫಲಾನುಭವಿಗಳಾದ್ದರಿಂದ ಅವರು ಈ ಯೋಜನೆಗೆ ಯಾವ ಆಕ್ಷೇಪವನ್ನೂ ಎತ್ತುವುದಿಲ್ಲ. ಈ ಸೌಲಭ್ಯವನ್ನು ತಾವೇ ಕಲ್ಪಿಸಿ ಕೊಂಡದ್ದರಿಂದ ಕೇಂದ್ರ ಸಚಿವ ಸಂಪುಟ ಆಕ್ಷೇಪಿಸುವ ಮಾತಂತೂ ದೂರವೇ.

ಮುಂದಿನ ಪ್ರಶ್ನೆ ಎಂದರೆ ಚುನಾವಣಾ ಆಯೋಗಕ್ಕೆ ಸಂಬಂಧಿಸಿದ ವಿಚಾರ. ಒಬ್ಬ ಲೋಕಸಭಾ ಸದಸ್ಯ ಐದು ವರ್ಷದಲ್ಲಿ ೫ ಕೋಟಿ ರೂ. ಗಳನ್ನೂ, ಒಬ್ಬ ರಾಜ್ಯಸಭಾ ಸದಸ್ಯ ಆರು ವರ್ಷಗಳಲ್ಲಿ ೬ ಕೋಟಿ ರೂ. ಗಳನ್ನೂ ತನ್ನ ಮತಕ್ಷೇತ್ರದಲ್ಲಿ ವೆಚ್ಚಮಾಡಿದರೆ ಮುಂದಿನ ಚುನಾವಣೆಯಲ್ಲಿ ಹಾಲಿ ಸಂಸದ ಉಳಿದ ಅಭ್ಯರ್ಥಿಗಳಿಗಿಂತ ನ್ಯಾಯೋಚಿತವಲ್ಲದ ಅನುಕೂಲಕರ ಸ್ಥಿತಿಯಲ್ಲಿರುತ್ತಾನಲ್ಲವೇ?

ಒಂದು ರಾಜ್ಯದ ಜನತೆಯ ಹಿತಕ್ಕಾಗಿ ಆ ರಾಜ್ಯದ ಎಷ್ಟು ಸಂಸದರಿದ್ದಾರೋ ಅಷ್ಟೇ ಸಂಖ್ಯೆಯ ಕೋಟಿ ರೂ.ಗಳನ್ನು ವೆಚ್ಚ ಮಾಡುವುದಕ್ಕೆ ಯಾವ ಆಕ್ಷೇಪಣೆಯೂ ಇಲ್ಲ. ಕೇಂದ್ರ ಸರ್ಕಾರ ಅಥವಾ ಸಂಸತ್ ಸದಸ್ಯರು ಸಮಷ್ಟಿ ರೂಪದಲ್ಲಿ ಅಪೇಕ್ಷೆ ಪಟ್ಟರೆ, ವಾರ್ಷಿಕ ಬಜೆಟ್ಟಿನಲ್ಲಿ ಅವಕಾಶ ಕಲ್ಪಿಸಿದರೆ, ಅದು ಉಭಯ ಸದನಗಳಲ್ಲೂ ಒಪ್ಪಿಗೆ ಪಡೆದರೆ ಹಣವನ್ನು ರಾಜ್ಯ ಸರ್ಕಾರಕ್ಕೆ ಕೊಡಮಾಡುವುದರಲ್ಲಿ ತಪ್ಪಿಲ್ಲ. ಏನೇ ಇರಲಿ, ಇಂಥ ವೆಚ್ಚಕ್ಕೆ ಕೇಂದ್ರ ಸರ್ಕಾರ ಜವಾಬ್ದಾರಿ ವಹಿಸಿಕೊಳ್ಳಬೇಕು. ★

(ಲೇಖಕರು ಸುಪ್ರೀಂ ಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶರು).

ವಾಚಕರಲ್ಲಿ ವಿನಂತಿ

"ಜನಪದ ವಿಚಾರ"ವನ್ನು ತಮ್ಮ ಸ್ನೇಹಿತರಿಗೂ, ಬಂಧುಗಳಿಗೂ ಪರಿಚಯ ಮಾಡಿಕೊಟ್ಟು ಅದರ ಅಭಿವೃದ್ಧಿಗೆ ಸಹಕರಿಸಬೇಕಾಗಿ ವಿನಂತಿ.

ಗಾಂಧೀ, ನೆಹರು, ಜೆ.ಪಿ. ಮತ್ತು ವಿನೋಬಾ

ಲೇ : ಕೆ.ಡಿ. ಗಂಗರಾಡೆ

(ಈ ನಾಲ್ವರೂ ಭಾರತ ಪಡೆದಂಥ ಮಹಾನ್ ನಾಯಕರು, ಚಿಂತಕರು ಮತ್ತು ಹೋರಾಟಗಾರರು. ಇವರೆಲ್ಲರ ಗುರಿ ಒಂದೇ: ಸ್ವಾತಂತ್ರ್ಯ. ಆದರೆ ಈ ನಾಲ್ವರ ವ್ಯಕ್ತಿತ್ವ ಒಂದೇ ತೆರನಾದುದಲ್ಲ. ಒಬ್ಬೊಬ್ಬರ ವ್ಯಕ್ತಿತ್ವದ ವಿಶಿಷ್ಟತೆಯಲ್ಲೂ ಏಕತೆಯ ದರ್ಶನವಿದೆ. ಈ ನಾಲ್ವರು ನಾಯಕರ ನಾಯಕ ಒಬ್ಬನೇ. ಅದು ಗಾಂಧೀ. ಆದರೂ ಸಹ ಅವರು ಮಾಡಿದ ಕಾರ್ಯ, ಇಟ್ಟುಕೊಂಡಿದ್ದ ವಿಚಾರ ಬೇರೆ-ಬೇರೆ. ಈ ನಾಯಕರ ವ್ಯಕ್ತಿತ್ವದ ಸಮನ್ವಯ ಈ ಲೇಖನದಲ್ಲಿದೆ.-ಸಂ)

ಯಾವುದೇ ಒಂದು ಜನಸಮುದಾಯದಲ್ಲಿ ಅಥವಾ ರಾಷ್ಟ್ರ ಜೀವನದಲ್ಲಿ ನಾಯಕನೆನ್ನುವವನು ಮಹತ್ವದ ಪಾತ್ರವಹಿಸುತ್ತಾನೆ. ಅವನು ಆ ಸಮುದಾಯವನ್ನು ಅಥವಾ ರಾಷ್ಟ್ರವನ್ನು ಕಟ್ಟಬಹುದು ಇಲ್ಲವೆ ಹಾಳುಗೆಡಬಹುದು. ನಾಯಕನು ತನ್ನ ನಾಯಕತ್ವವನ್ನು ಹಿಂಬಾಲಕರಷ್ಟೇ ಪ್ರೀತಿಸುತ್ತಾನೆ. ಅವರೆಲ್ಲರೂ ಒಂದೇ ಗುರಿಯೊಂದಿಗೆ ತಮ್ಮನ್ನು ಗುರುತಿಸಿಕೊಂಡಿರುತ್ತಾರೆ. ಒಂದು ವೇಳೆ ಆ ಗುರಿಯ ಬಗ್ಗೆ ಭಿನ್ನಾಭಿಪ್ರಾಯ ಉಂಟಾದಲ್ಲಿ ಆ ಇಡಿ ಸಂಘಟನೆಯೇ ಒಡೆದುಹೋಗುತ್ತದೆ. ಭಿನ್ನಾಭಿಪ್ರಾಯ ಉಂಟಾಗುವುದು ಸಹಜ. ಆ ಸಂಘಟನೆಯ ಸದಸ್ಯರು ಕೇವಲ ತಮ್ಮ ಸ್ವಾರ್ಥವನ್ನು ನೋಡಿಕೊಳ್ಳುವುದನ್ನು ಬಿಟ್ಟರೆ ಆ ಭಿನ್ನಾಪ್ರಾಯಗಳನ್ನು ಬಗೆಹರಿಸಬಹುದು.

ಮಹಾತ್ಮ ಗಾಂಧೀ, ಜವಹರಲಾಲ್ ನೆಹರು ವಿನೋಬಾ ಮತ್ತು ಲೋಕ ನಾಯಕ್ ಜಯಪ್ರಕಾಶ್‌ರಂಥ ನಾಲ್ಕು ಮಹಾನ್ ನಾಯಕರನ್ನು ಹೊಂದಿರುವ ಭಾರತ ನಿಜವಾಗಿಯೂ ಅದೃಷ್ಟಶಾಲಿ ದೇಶವೆಂದೇ ಹೇಳಬೇಕು.

ಮಹಾತ್ಮ ಗಾಂಧೀ ಭಾರತ ದೇಶದಲ್ಲಿ ಮಾತ್ರವಲ್ಲ ಇಡೀ ವಿಶ್ವದಲ್ಲಿಯೇ ತಮ್ಮ ಕಾಲದ ಅತಿ ದೊಡ್ಡ ನಾಯಕರಾಗಿದ್ದರು. "ಮುಂದಿನ ಜನಾಂಗವು ಗಾಂಧೀಯಂಥ ಒಬ್ಬ ವ್ಯಕ್ತಿ ಈ ಭೂಮಿಯ ಮೇಲೆ ನಡೆದಾಡಿದ್ದ ಎಂದು ನಂಬುವುದೇ ಕಷ್ಟವಾಗುತ್ತದ'' ಎಂದು ಆಲ್ಬರ್ಟ್ ಐನ್‌ಸ್ಟೈನ್ ಉದ್ಗಾರ ತೆಗೆದಿದ್ದರು. ಇಂಗ್ಲೆಂಡಿನ ಸಾಮ್ರಾಜ್ಯದಲ್ಲಿ ನಡುಕುಂಟು ಮಾಡಿದಂಥ ಏಕ ವ್ಯಕ್ತಿಸೇನೆ ಗಾಂಧೀ ಆಗಿದ್ದರೆಂದು ಲಾರ್ಡ್ ಮೌಂಟ್‌ಬ್ಯಾಟನ್ ಅಂದಿದ್ದರು.

ಈ ಮೂರು ನಾಯಕರೂ ದೇಶಕ್ಕೆ ಸ್ವಾತಂತ್ರ್ಯ ತರುವುದರಲ್ಲಿ ಮಹತ್ವದ ಪಾತ್ರ ವಹಿಸಿದ್ದರಲ್ಲದೆ ದೇಶದ ಅಭಿವೃದ್ಧಿಯ ಕೆಲಸದಲ್ಲಿ ಕೂಡ, ಬಿಮಲ್ ಪ್ರಸಾದ್ ಎಂಬುವವರು **"ಗಾಂಧೀ, ನೆಹರು ಮತ್ತು ಜೆ.ಪಿ ನಾಯಕತ್ವದ ಅಧ್ಯಯನ"** ಎಂಬ ಗ್ರಂಥದಲ್ಲಿ ಜನ ಸಂಘಟನೆಯ ಕ್ಷೇತ್ರದಲ್ಲಿ ಈ ಮೂವರು ನಾಯಕರ ಪರಸ್ಪರ ಪಾತ್ರಗಳ ಬಗ್ಗೆ ತುಲನಾತ್ಮಕ ಅಧ್ಯಯನ ಮಾಡಿದ್ದಾರೆ. ಗಾಂಧೀಜಿಯವರ ನಾಯಕತ್ವದ ಇಳಿಮುಖಕ್ಕೆ ಪ್ರಧಾನ ಕಾರಣ ಗಾಂಧೀಯವರು ಹೊಂದಿದ್ದ ಗುರಿ ಮತ್ತು ಅವರ ಅನುಯಾಯಿಗಳು ಹೊಂದಿದ್ದ ಗುರಿಗಳ ಮಧ್ಯದ ವಿವಾದವೇ ಕಾರಣವೆಂದು ಬಿಮಲ್ ಪ್ರಸಾದ್ ಅಭಿಪ್ರಾಯ ಪಡುತ್ತಾರೆ. ಗಾಂಧೀಯವರ ಅನುಯಾಯಿಗಳು ಅಧಿಕಾರವನ್ನು ಹಿಡಿಯಲು ಬಹಳ ಚಡಪಡಿಸುತ್ತಿದ್ದರು ಮತ್ತು ಕಾತುರವುಳ್ಳವರಾಗಿದ್ದರು. ಗಾಂಧೀಯವರ ಉಪದೇಶಕ್ಕೆ ವಿರೋಧವಾಗಿ ಅನುಯಾಯಿಗಳು ದೇಶದ ವಿಭಜನೆಗೆ ಒಪ್ಪಿಕೊಂಡರು. ನಿಜಸಂಗತಿಯೇನೆಂದರೆ ಅಂಥ ದೊಡ್ಡ ವಿಷಯವನ್ನು ಗಾಂಧೀಜಿಯವರಿಗೆ ಖುದ್ದಾಗಿ ತಿಳಿಸಲು ಯಾರೂ ಗಮನವನ್ನೇ ಕೊಡಲಿಲ್ಲ; ಗಾಂಧೀಜಿ ಆ ವಿಷಯವನ್ನು ಪತ್ರಿಕೆಗಳ ಮೂಲಕ ತಿಳಿದು ಕೊಂಡರು.!

ದೇಶದ ಸಾಮಾಜಿಕ-ಆರ್ಥಿಕ ಮತ್ತು ರಾಜಕಿಯ ಅಭಿವೃದ್ಧಿಗೆ ಈ ಮೂವರು ನಾಯಕರಿಗೆ ದೇಶ ಆಭಾರಿಯಾಗಬೇಕಾಗಿದೆ. ಇವರು ವಿಚಾರವಾದಿಗಳಾಗಿದ್ದರು ಮತ್ತು ಜನರಿಗೆ ಬಹಳ ಅಗತ್ಯವಾಗಿದ್ದ ಸಮಯದಲ್ಲಿ ಅವರಿಗೆ ಮಾರ್ಗದರ್ಶನ ಕೊಟ್ಟರು. ಬಿಮಲ್ ಪ್ರಸಾದ್ ತಮ್ಮ ಪುಸ್ತಕವನ್ನು ನಾಲ್ಕು ಅಧ್ಯಾಯಗಳಲ್ಲಿ ವಿಂಗಡಿಸಿದ್ದಾರೆ. ಮೊದಲಿನ ಮೂರು ಅಧ್ಯಾಯಗಳಲ್ಲಿ ಈ ಮೂರು ನಾಯಕರ ಸೇವೆಯನ್ನು ಪ್ರತ್ಯೇಕವಾಗಿ ತಿಳಿಸಿದ್ದಾರೆ. ನಾಲ್ಕನೇಯ ಅಧ್ಯಾಯದಲ್ಲಿ ಇವರೆಲ್ಲರ ಸೇವೆಯ ವಿಷಯಗಳನ್ನು ಸಂಯೋಜಿಸಿದ್ದಾರೆ. ಮೊದಲನೆಯ ಅಧ್ಯಾಯದಲ್ಲಿ ಲೇಖಕರು ಗಾಂಧೀ ಕೇವಲ ಒಬ್ಬ ಸ್ವಾತಂತ್ರ್ಯ ಹೋರಾಟಗಾರನಾಗಿರದೆ ನ್ಯಾಯಯುತ ಸಮಾಜದ ಸ್ಥಾಪನೆಯ ಪ್ರತಿಪಾದಕನಾಗಿದ್ದನೆಂದೂ ತಿಳಿಸಿದ್ದಾರೆ. ಗಾಂಧೀಯವರ ಮುಖ್ಯ ಉದ್ದೇಶ ಅನ್ಯಾಯವನ್ನು ಅಹಿಂಸಾತ್ಮಕವಾಗಿ ಎದುರಿಸುವುದೇ ಆಗಿತ್ತು. ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ಗಾಂಧೀಯವರ ಈ ಸಂದೇಶ ರಾಜಕೀಯವಾಗಿ ಜಾಗೃತರಾಗಿದ್ದ ಬಹುದೊಡ್ಡ ಜನಸಮುದಾಯದ ಭಾವನೆಯನ್ನು ಉತ್ತೇಜಿಸಿತು. ಉತ್ತೇಜಿತಗೊಂಡ ಜನರ ಆ ಭಾವನೆಯೇ ೧೯೧೯ ರಿಂದ ೧೯೨೦ ನೇ ಇಸವಿಯಲ್ಲಿ ಗಾಂಧೀಯನ್ನು ಅತ್ಯುನ್ನತ ನಾಯಕತ್ವದ ಸ್ಥಾನಕ್ಕೆ ತಂದು ನಿಲ್ಲಿಸಿತು. ೧೯೦೬ ರಿಂದ ೧೯೧೩ನೇ ಇಸ್ವಿವರೆಗೆ ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿದ್ದಾಗ ಮಾಡಿದ

ಹೋರಾಟ ಮತ್ತು ಅನಂತರ ಭಾರತದಲ್ಲಿ ಅನ್ಯಾಯದ ವಿರುದ್ಧ ಮಾಡಿದ ಹೋರಾಟದ ಫಲವಾಗಿ ದೇಶದ ಬಹುಸಂಖ್ಯಾತ ರಾಜಕೀಯ ಕಾರ್ಯಕರ್ತರು ಮತ್ತು ಜನಸಾಮಾನ್ಯರು ಗಾಂಧೀಯವರತ್ತ ಆಕರ್ಷಿತರಾಗಿದ್ದರು. ದುರ್ದೈವದ ಸಂಗತಿಯೇನೆಂದರೆ ಗಾಂಧೀಜಿಯವರನ್ನು ಕುರಿತು ಜೀವನ ಚರಿತ್ರೆ ಬರೆದಂಥ ಅನೇಕ ಲೇಖಕರು ಈ ಮಾತನ್ನು ಕೈಬಿಟ್ಟಿದ್ದಾರೆ. ಕೆಲವರು ಗಾಂಧೀಜಿಯವರ ನಾಯಕತ್ವದ ಏರಿಕೆಗೆ ಅವರು ತಮ್ಮ ಸ್ವಯಿಚ್ಛೆಯಿಂದ ಸ್ವೀಕರಿಸಿದ್ದ ಬಡತನದ ಜೀವನ, ಸರಳತೆ, ವಿನಂಮ್ರತೆ ಮತ್ತು ರುಜುತ್ವದಂಥ ಕಾರಣಗಳೆಂದು ಹೇಳುತ್ತಾರೆ ಮತ್ತು ಅವರು ''ಮಹಾತ್ಮ'' ಆದುದೇ ಕಾರಣವೆಂದು ಹೇಳುತ್ತಾರೆ. ಇನ್ನು ಕೆಲವರು ಗಾಂಧೀಯವರ ಆಕರ್ಷಣೆಗೆ ಅವರಲ್ಲಿದ್ದ ಸಾಧುತನವೇ ಮುಖ್ಯ ಕಾರಣವಾಗಿತ್ತೆಂದು ಹೇಳುತ್ತಾರೆ. ಆದರೆ ಈ ಯಾವುದೇ ವಿವರಣೆ ಸರಿಯಿಲ್ಲ.

ನಾಯಕತ್ವದ ಬಗ್ಗೆ ಮೂರು ಸೂತ್ರಗಳಿವೆ: ಒಂದನೆಯದು, ನಾಯಕರೆಂಬುವವರು ಸಹಜವಾಗಿ ಹುಟ್ಟುತ್ತಾರೆ; ಎರಡನೆಯದು, ನಾಯಕರೆಂಬುವರು ಒಂದು ವಿಶಿಷ್ಟ ಸನ್ನಿವೇಶದ ಪರಿಣಾಮವಾಗಿ ಬರುತ್ತಾರೆ; ಮತ್ತು ಮೂರನೆಯದು, ಕೆಲವರು ತಮ್ಮ ವ್ಯಕ್ತಿತ್ವದಲ್ಲಿಯ ವಿಶಿಷ್ಟಗುಣಗಳಿಂದಲೇ ನಾಯಕರಾಗುತ್ತಾರೆ. ಸೈದ್ಧಾಂತಿಕವಾಗಿ ಹೇಳುವುದಾದರೆ ಕೆಲವು ಸಂದರ್ಭದಲ್ಲಿ ಯಾವ ವ್ಯಕ್ತಿಯು ಸಂದರ್ಭಕ್ಕನುಗುಣವಾದ ನಾಯಕತ್ವದ ಅಗತ್ಯತೆಗಳನ್ನು ಪೂರೈಸುತ್ತಾನೋ ಅವನು ಜನನಾಯಕನಾಗುತ್ತಾನೆ. ಸುತ್ತಲಿರುವ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸುವ ವ್ಯಕ್ತಿಯಾಗಿದ್ದರು ಗಾಂಧೀ, ಆ ಪರಿಸ್ಥಿತಿಯನ್ನು ಎದುರಿಸಲು ಅವರು ತಮ್ಮನ್ನು ತಾವು ಪೂರ್ಣವಾಗಿ ಸಿದ್ಧಗೊಳಿಸಿಕೊಳ್ಳುತ್ತಿದ್ದರು.

ಶಾಂತಿಯುತವಾದ ಆದರೆ ತೀವ್ರ ಪರಿಣಾಮಕಾರಿಯಾದ ಕ್ರಿಯೆಯನ್ನು ಅವರು ತೋರಿಸುತ್ತಿದ್ದುದರಿಂದ ರಾಜಕೀಯವಾಗಿ ಜಾಗೃತರಾದ ಜನರ ಗಮನವನ್ನು ಅವರು ಸೆಳೆದಿದ್ದರು. ಅವರ ರಾಜಕಾರಣ ಕೇವಲ ಸಮಾಜದ ಮೇಲ್ವರ್ಗದವರಿಗೆ ಮಾತ್ರ ಸೀಮಿತವಾಗಿರದೆ ಜನಸಾಮಾನ್ಯರೂ ಭಾಗಿಯಾಗುವ ರೀತಿಯಲ್ಲಿರುತ್ತಿತ್ತು. ಇದರಿಂದಾಗಿ ಜನರು ತಮ್ಮ ಹಕ್ಕುಗಳಿಗಾಗಿ ನಿರ್ಭಯವಾಗಿ ಹೋರಾಟ ಮಾಡಲು ಸಾಧ್ಯವಾಗುತ್ತಿತ್ತು. ಕಾಂಗ್ರೆಸ್ ಸಂಘಟನೆಯು ಅದು ಸ್ಥಾಪಿತವಾದ ದಿನದಿಂದಲೇ ನಾಯಕತ್ವದ ದುಃಸ್ಥಿತಿಯನ್ನು ಎದುರಿಸುತ್ತಿತು. ಬಂಗಾಲದ ವಿಭಜನೆಯಾದನಂತರ ಮತ್ತು ಇಂಗ್ಲೀಷ್ ಸರ್ಕಾರದ ದಬ್ಬಾಳಿಕೆಯನಂತರ ಜನರು ಕಾಂಗ್ರೆಸ್ ನಾಯಕತ್ವದಿಂದ ಬೇಸತ್ತಿದ್ದರು. ಇದುವರೆಗೆ ಕಾಂಗ್ರೆಸ್ ಸಂಘಟನೆ ಇಂಗ್ಲೀಷ್ ಸರ್ಕಾರಕ್ಕೆ ಕೇವಲ ಮನವಿಗಳನ್ನು

ಸಲ್ಲಿಸುತ್ತಾ ಬರುವ ಪರಿಪಾಠವನ್ನು ಇಟ್ಟುಕೊಂಡಿತ್ತು. ಜನರು ಈ ಪರಿಪಾಠದ ಬಗ್ಗೆ ಬೇಸತ್ತುಗೊಂಡಿದ್ದರು. ಈ ಪರಿಪಾಠವನ್ನೇ ನಿಲ್ಲಿಸಬಯಸಿದ್ದರು. ಅವರು ತಮ್ಮದೇ ಸರ್ಕಾರವನ್ನು ಹೊಂದಲು ಸಾಧ್ಯವಾಗುವಂಥ ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಉತ್ಸುಕರಾಗಿದ್ದರು. ಆಗ ಕಾಂಗ್ರೆಸ್ ಎರಡು ಭಾಗವಾಯಿತು. ಒಂದು ಭಾಗವು ಉಗ್ರಗಾಮಿಗಳದ್ದಾಗಿದ್ದರೆ ಇನ್ನೊಂದು ಭಾಗವು ಸೌಮ್ಯವಾದಿಗಳದಾಗಿತ್ತು. ಸೌಮ್ಯವಾದಿಗಳು ಕಾಂಗ್ರೆಸ್ಸನ್ನು ಪುನರ್‌ಸಂಘಟಿಸಿದರು. ಆ ಸಂದರ್ಭದಲ್ಲಿ ಅವರು ಉಗ್ರಗಾಮಿಗಳನ್ನು ದೂರವಿಟ್ಟರು. ಆದರೆ ಉಗ್ರವಾದಿಗಳು ತಮ್ಮನ್ನು ತಾವು ಸಂಘಟಿಸಿಕೊಳ್ಳಲು ವಿಫಲರಾದರು. ಇದರಿಂದಾಗಿ ಕ್ರಾಂತಿಕಾರಿ ಭಯೋತ್ಪಾದನೆಯ ಚಟುವಟಿಕೆಗಳು ಹುಟ್ಟಲು ಕಾರಣವಾಯಿತು.

ಜನರನ್ನು ಸಂಘಟಿಸುವಲ್ಲಿ ಅಸಾಧಾರಣ ಸಂಯೋಜಕರಾಗಿದ್ದರೆಂಬ ಖ್ಯಾತಿಯನ್ನು ಗಾಂಧೀ ಪಡೆದಿದ್ದರು. ಅವರು ತಮ್ಮ ಈ ಸಾಮರ್ಥ್ಯವನ್ನು ಆಗಲೇ ಆಫ್ರಿಕಾ ಮತ್ತು ಭಾರತದಲ್ಲಿ ತೋರಿಸಿಕೊಟ್ಟಿದ್ದರು. ಏನೂ ಅರಿಯದಂಥವರನ್ನೂ ಅವರು ನಾಯಕರನ್ನಾಗಿ ಮಾಡುತ್ತಿದ್ದರು. ಅವರಲ್ಲಿ ಅಡಗಿರುವ ಸಾಮರ್ಥ್ಯವನ್ನು ಗುರುತಿಸುವಂಥ ಅಸಾಧಾರಣವಾದ ಬುದ್ಧಿಯನ್ನು ಗಾಂಧೀ ಹೊಂದಿದ್ದರು. ಅವರಿಗೆ ಸೂಕ್ತವಾದ ಜವಾಬ್ದಾರಿಗಳನ್ನೂ ಕೊಡುತ್ತಿದ್ದರು.

ಗಾಂಧೀಯವರಲ್ಲಿದ್ದ ಶ್ರೇಷ್ಠತಮ ನಾಯಕತ್ವವು ೧೯೪೨ರಲ್ಲಿ ಕಂಡುಬಂತು. ಆದರೆ ಅದು ಕೊನೆಯದೂ ಆಗಿತ್ತು. ಅನಂತರ ಅವರ ನಾಯಕತ್ವವು ಸ್ಪಷ್ಟವಾಗಿ ಇಳಿಮುಖವಾಗುತ್ತಾ ಬಂತು ಮತ್ತು ನಂತರ ಪೂರ್ಣವಾಗಿ ಬಿದ್ದೇ ಹೋಯಿತು. ಅಧಿಕಾರದ ಗದ್ದುಗೆಯನ್ನೇರಿದ ಕಾಂಗ್ರೆಸ್ ನಾಯಕರು ಸಂಧಾನದ ಮೂಲಕ ಸ್ವಾತಂತ್ರ್ಯ ಪಡೆಯಲು ಪ್ರಾರಂಭಿಸಿದರು. ಆ ಸಮಯದಲ್ಲಿ ಗಾಂಧೀಯವರ ನಾಯಕತ್ವ ಅತ್ಯಾವಶ್ಯಕವೆಂದು ಯಾರೂ ಪರಿಭಾವಿಸಲೇ ಇಲ್ಲ. ಗಾಂಧೀಯವರ ಬಹಳ ಹತ್ತಿರದ ವ್ಯಕ್ತಿಗಳೆಂದು ತಿಳಿಯಲ್ಪಟ್ಟಿದ್ದ ನೆಹರು ಮತ್ತು ಪಟೇಲ್ ಕೂಡ ಅದೇ ರೀತಿ ವರ್ತಿಸಿದರು. ಗಾಂಧೀಯನ್ನು ಪರಾಮರ್ಶಿಸದೆ ತಮ್ಮದೇ ಆದ ತೀರ್ಮಾನ ಕೈಗೊಳ್ಳಲು ಅವರು ಸಿದ್ಧರಾಗಿದ್ದರು. ೧೯೪೯ರ ನಂತರ ಗಾಂಧೀ ಕೇವಲ ತಮ್ಮ ನೈತಿಕ ಶಕ್ತಿಯ ಆಧಾರದ ಮೇಲೆ ನಾಯಕರಾಗಿ ಕಾರ್ಯವೆಸಗಿದರು. ೧೯೨೦ ರಿಂದ ೧೯೪೭ ಮತ್ತು ೧೯೪೭ ರಿಂದ ೧೯೪೮ ಈ ವರ್ಷಗಳಲ್ಲಿ ಗಾಂಧೀಜಿಯವರ ನಾಯಕತ್ವದಲ್ಲಿದ್ದ ವ್ಯತ್ಯಾಸ ಇದೇ ಆಗಿತ್ತು. ಈ ಕಾಲದಲ್ಲಿ ನಾಯಕರೆಲ್ಲರೂ ಒಬ್ಬರಿಗಿಂದ ಒಬ್ಬರು ದೂರ ಹೋದರು. ಏಕೆಂದರೆ ಎಲ್ಲರನ್ನೂ ಕೂಡಿಡುವಂಥ ಯಾವುದೇ ಸಾಮಾನ್ಯವಾದ ಗುರಿ ಆಗ ಇರಲಿಲ್ಲ.

ಮಹಾತ್ಮ ಗಾಂಧೀಯವರ ನಂತರ ದೇಶದಲ್ಲಿ ಅತ್ಯಂತ ಗೌರವಾನ್ವಿತ ವ್ಯಕ್ತಿ ಜವಹರ್‌ಲಾಲ್ ನೆಹರು ಆಗಿದ್ದರು. ಆದರೆ ಅವರನ್ನು ಆಧುನಿಕ ಭಾರತದ ನಿರ್ಮಾತೃ ಎಂದು ಮಾತ್ರ ಗುರುತಿಸಲಾಗುತ್ತದೆ. ಅವರು ೧೭ ವರ್ಷಗಳ ಕಾಲ ದೇಶದ ಪ್ರಧಾನಿಯಾಗಿದ್ದರು. ೧೯೧೯ ರಿಂದ ೧೯೪೭ರ ವರೆಗಿನ ಕಾಲವನ್ನು ಗಾಂಧೀ ಯುಗವೆಂದೂ ಮತ್ತು ೧೯೪೭ ರಿಂದ ೧೯೬೪ರ ವರೆಗಿನ ಕಾಲವನ್ನು ನೆಹರು ಯುಗವೆಂದೂ ಕರೆಯಬಹುದು. ವಸಾಹತುಶಾಹಿಯ ವಿರುದ್ಧ ನಡೆದ ಹೋರಾಟದ ಕಾಲದಿಂದ ಹಿಡಿದು ಸ್ವಾತಂತ್ರ್ಯ ಬರುವವರೆಗೆ ದೇಶಕ್ಕೆ ಅಗತ್ಯವಾಗಿದ್ದ ಅಖಂಡ ರೂಪದ ನಾಯಕತ್ವವನ್ನು ನೆಹರು ಒದಗಿಸಿಕೊಟ್ಟರು. ಅವರ ನಾಯಕತ್ವದ ರಾಜಕೀಯ ಸಿದ್ಧಾಂತವನ್ನು **"ಪ್ರಜಾಸತ್ತಾತ್ಮಕ ಸಮಾಜವಾದ"** ಎಂದು ಕರೆಯಬಹುದು. ಸಾಮಾಜಿಕ ಸ್ವಾತಂತ್ರ್ಯವಿಲ್ಲದೆ ಮತ್ತು ಸಮಾಜವಾದಿ ಸಮಾಜದ ನಿರ್ಮಾಣವಾಗದೆ ದೇಶವಾಗಲೀ, ವ್ಯಕ್ತಿಯಾಗಲೀ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲವೆಂದು ನೆಹರು ದೃಢವಾದ ಅಭಿಪ್ರಾಯವುಳ್ಳವರಾಗಿದ್ದರು. ಅವರು ಗಾಂಧೀಜಿಯವರ ನಾಯಕತ್ವದ ಆಶ್ರಯದಲ್ಲಿ ಬೆಳೆದಿದ್ದರಿಂದ ಹಿಂಸೆಯನ್ನು ದ್ವೇಷಿಸುತ್ತಿದ್ದರು. ತಾತ್ವಿಕವಾಗಿಯೂ ಹಿಂಸೆಯನ್ನು ನಿರಾಕರಿಸಿದ್ದರು. ಆದರೂ ಸಹ ಕಾಂಗ್ರೆಸ್‌ನೊಂದಿಗಿದ್ದ ತಮ್ಮ ಘನಿಷ್ಠ ಸಂಬಂಧದ ಕಾರಣದಿಂದಾಗಿ ಕಾಂಗ್ರೆಸ್‌ನಲ್ಲಿ ಒಡಕುಂಟಾಗಬಹುದಾದಂಥ ಯಾವುದೇ ಕ್ರಮವನ್ನು ಕೈಗೊಳ್ಳಲು ನೆಹರು ಇಷ್ಟ ಪಡಲಿಲ್ಲ. ಇದರಿಂದಾಗಿ ಕಾಂಗ್ರೆಸ್‌ನಲ್ಲಿದ್ದ ಹಳೆ ಬಲಪಂಥೀಯರೊಂದಿಗೆ ಸಮಾಜವಾದಿ ವಿಚಾರದ ಎಡ ಪಂಥೀಯರನ್ನೂ ಸಂಘಟನೆಯಲ್ಲಿ ಒಂದುಗೂಡಿಸಿಕೊಂಡಿರಲು ನೆಹರೂಗೆ ಸಾಧ್ಯವಾಯಿತು. ಯಾವುದೇ ಒಂದು ಸಂಘಟನೆಯ ಆರೋಗ್ಯಕ್ಕೆ ಆ ಸಂಘಟನೆಯ ನಾಯಕರಲ್ಲಿ ಇರಬೇಕಾದ ಪರಸ್ಪರದಲ್ಲಿಯ ನಂಬಿಕೆಮತ್ತು ವಿಶ್ವಾಸಗಳೇ ಆಧಾರದೆಂದು ನೆಹರು ಭಾವಿಸಿದ್ದರು. ಇದಕ್ಕಾಗಿ ಅವರು ತತ್ವ ಬಹಳ ಮುಖ್ಯವೆಂದು ಭಾವಿಸಿರಲಿಲ್ಲ. ನೆಹರೂರವಲ್ಲಿದ್ದ ಮನೋಭಾವ, ಪರಿಶ್ರಮ, ಧೈರ್ಯ ಉತ್ಸಾಹ ಹಾಗೂ ಬುದ್ಧಿವಂತರನ್ನು ಆಕರ್ಷಿಸುವ ವ್ಯಕ್ತಿತ್ವದ ಗುಣಗಳನ್ನು ಗಾಂಧೀ ಬಹಳವಾಗಿ ಮೆಚ್ಚಿದ್ದರು.

ಕಾಂಗ್ರೆಸ್ ನಾಯಕರು ಹೊಂದಾಣಿಕೆಯ ಮನೋಭಾವವನ್ನು ಬೆಳೆಸಿಕೊಂಡಿದ್ದರ ಫಲವಾಗಿ ದೇಶ ಇಬ್ಭಾಗವಾಯಿತು. ಇಲ್ಲಿ ನೆಹರು ಇತರ ನಾಯಕರ ಮೇಲೆ ಪ್ರಭಾವ ಬೀರಲು ವಿಫಲರಾದರು. ಏಕೆಂದರೆ ದೇಶದ ರಾಜಕೀಯ ಐಕ್ಯತೆಯನ್ನು ಕಾಪಾಡುವಲ್ಲಿ ಕಾಂಗ್ರೆಸ್ ಅತ್ಯಂತ ಪರಿಣಾಮಕಾರಿ ಸಾಧನವಾಗಿದೆ ಎಂಬುದು ನೆಹರೂರವರ ಮನಸ್ಸಿನಲ್ಲಿ ದೃಢವಾಗಿ ನೆಲೆಯೂರಿತ್ತು. ಆದರೆ ನೆಹರೂರ ಮರಣದ ನಂತರ ಸಂಭವಿಸಿದ ಘಟನೆಗಳು

ನೆಹರೂರ ಈ ಕಲ್ಪನೆಯನ್ನು ಸುಳ್ಳಾಗಿಸಿದವು.

ನೆಹರು ಪ್ರಧಾನಮಂತ್ರಿಯಾಗಿದ್ದಾಗ ದೇಶಕ್ಕೆ ಅಖಂಡವಾದ ನಾಯಕತ್ವ ವನ್ನು ಕೊಡುವುದರ ಮೂಲಕ ತಮ್ಮ ಪ್ರಧಾನ ಮಂತ್ರಿ ಅಧಿಕಾರವನ್ನು ಚಲಾಯಿಸಲು ಪ್ರಯತ್ನಿಸಿದರೂ ತಾವೇ ಬಹುವಾಗಿ ಪ್ರೀತಿಸಿದ್ದ ತತ್ವ ಮತ್ತು ಗುರಿಗಳ ಸಾಧನೆಗಾಗಿ ಏನನ್ನೂ ಮಾಡಲಿಲ್ಲ.

ಸಂಘಟನಾತ್ಮಕ ಕೆಲಸಗಳ ಬಗ್ಗೆ ನೆಹರೂರವರಿಗೆ ಅಭಿರುಚಿಯಿರಲಿಲ್ಲ. ಆದ್ದರಿಂದ ಕಾಂಗ್ರೆಸ್ಸಿನ ಸಂಘಟನಾ ಸ್ವರೂಪ ಯಥಾವತ್ತಾಗಿಯೇ ಉಳಿಯಿತು ಮತ್ತು ಸಂಘಟನೆಯಲ್ಲಿ ಇದ್ದ ವಾತಾವರಣ ಬಹಳಷ್ಟು ಹದಗೆಡುತ್ತಾ ಬಂತು. ನೆಹರು ಓರ್ವ ಸಂಧಾನಕಾರರಾಗಿ ಮಾತ್ರ ಕೆಲಸ ಮಾಡುತ್ತಾ ಬಂದರು. ಉನ್ನತ ಹಂತದ ನಾಯಕತ್ವದಲ್ಲಿ ಯಾವ ಬದಲಾವಣೆ ಇರದಿದ್ದರೂ ಸರ್ಕಾರ ದಲ್ಲಿದ್ದ ನೌಕರಶಾಹಿ ಹಳೆಯ ಕಾಲದ ರೀತಿ ನೀತಿಗಳನ್ನೇ ಮತ್ತು ಮೌಲ್ಯಗಳನ್ನೇ ಅನುಸರಿಸುತ್ತಾ ಬಂತು. ಹಳೆಯ ಕಾಲದ ರಚನೆಯನ್ನಿಟ್ಟು ಕೊಂಡು ಯಾವುದೇ ಸಾಮಾಜಿಕ ಕ್ರಾಂತಿಯನ್ನು ಪ್ರಾರಂಭಿಸಲು ಸಾಧ್ಯವಿಲ್ಲ ಎಂಬುದನ್ನು ನಾವು ಅರಿತಿರಬೇಕಾಗುತ್ತದೆ.

ಪ್ರಧಾನ ಮಂತ್ರಿಯಾಗಿ ನೆಹರೂರವರ ಉದ್ದೇಶಗಳು ಇಂತಿದ್ದವು:-

1) ರಾಷ್ಟ್ರದ ಐಕ್ಯತೆಯನ್ನು ಕಾಪಾಡಿಕೊಂಡು ಬರುವುದು;

2) ದೇಶದಲ್ಲಿ ಧರ್ಮ ನಿರಪೇಕ್ಷತೆಯ ಮತ್ತು ಪ್ರಜಾಪ್ರಭುತ್ವದ ಅಡಿಪಾಯ ವನ್ನು ಹಾಕುವುದು;

3) ಯೋಜನಾ ಬದ್ಧ ಮಾರ್ಗದಲ್ಲಿ ಸಾಮಾಜಿಕ ಬದಲಾವಣೆಯನ್ನು ತೀವ್ರ ಗೊಳಿಸುವುದು;;

4) ಕೊನೆಯದಾಗಿ ಸಮಾಜವಾದವನ್ನು ಸ್ಥಾಪಿಸುವುದು.

ಗಾಂಧೀ ಮತ್ತು ನೆಹರೂ ಹೊಂದಿದ್ದ ನ್ಯಾಯಯುತ ಸಾಮಾಜಿಕ ಸುವ್ಯವಸ್ಥೆಯ ವಿಚಾರವನ್ನು ಸಾಧ್ಯವಾಗಿಸುವ ಜವಾಬ್ದಾರಿ ಜೆ.ಪಿ.ಯವರ ಮೇಲೆ ಬಿತ್ತು. ಜಯಪ್ರಕಾಶರು ಮೊದಲು ಗಾಂಧೀ ವಿಚಾರದಿಂದ ಮಾರ್ಕ್ಸ್ ವಿಚಾರಕ್ಕೆ ಬಂದರು. ನಂತರ ಪುನಃ ಗಾಂಧೀ ವಿಚಾರಕ್ಕೇ ಮರಳಿದರು. ಜನಸಾಮಾನ್ಯರ ದುಃಖದ ಕಣ್ಣೀರನ್ನು ಒರೆಸಬೇಕೆಂಬ ಗಾಂಧೀಯವರ ವಿಚಾರವನ್ನು ಜಯ ಪ್ರಕಾಶರು ಎತ್ತಿಕೊಂಡರು. ಜನಸಾಮಾನ್ಯರಲ್ಲಿ ಮತ್ತು ಮೇಲ್ವರ್ಗದವರಲ್ಲಿ ನೆಹರು ನಂತರ ಜನಪ್ರಿಯತೆಯಲ್ಲಿ ಜಯಪ್ರಕಾಶರು ಎರಡನೇ ಸ್ಥಾನದಲ್ಲಿದ್ದರು. ನೆಹರು ನಂತರ ಪ್ರಧಾನಮಂತ್ರಿಯಾಗಲು ಅತ್ಯಂತ ಯೋಗ್ಯವ್ಯಕ್ತಿ ಜಯ ಪ್ರಕಾಶರೆಂದೂ ಜನ ಭಾವಿಸಿದ್ದರು.

ತಮ್ಮ ಆರೋಗ್ಯ ಸರಿಯಿಲ್ಲದೆಯಿದ್ದರೂ ಜಯಪ್ರಕಾಶರು ಜನತಾ ಪಾರ್ಟಿಯನ್ನು ಸ್ಥಾಪಿಸುವುದರ ಮೂಲಕ ಪ್ರಜಾಪ್ರಭುತ್ವವನ್ನು ಪುನಃ ದಾರಿಗೆ ತಂದು ನಿಲ್ಲಿಸಿದರು. ಅವರು ಯಾವುದೇ ಅಧಿಕಾರವನ್ನು ಹುಡುಕಿಕೊಂಡು ಹೋಗಲಿಲ್ಲ. ಹಾಗೆಯೇ ಯಾವುದೇ ಪ್ರಕಾರದ ಅಧಿಕಾರ ಸ್ಥಾನವೂ ಜಯಪ್ರಕಾಶರನ್ನು ಆಮಿಷಕ್ಕೆ ಒಳಪಡಿಸಲು ಸಾಧ್ಯವಾಗಲಿಲ್ಲ. ಅಧಿಕಾರ ದೊರೆತ ಮೇಲೆ ಗಾಂಧೀಯನ್ನು ಯಾವ ರೀತಿ ಅವರ ಅನುಯಾಯಿಗಳು ಮರೆತರೊ ಅದೇ ರೀತಿ ಜಯಪ್ರಕಾಶರು ಸಹ ಅವರ ಅನುಯಾಯಿಗಳಿಂದ ಉದಾಸೀನಕ್ಕೊಳಗಾದರು. ಬಹಳ ದುಃಖದಿಂದ ಕೂಡಿದವರಾಗಿ ಜಯಪ್ರಕಾಶರು ತೀರಿಕೊಂಡರು. ನೆಹರು ಮತ್ತು ಜಯಪ್ರಕಾಶರು ಆತ್ಮೀಯ ಮಿತ್ರರಾಗಿದ್ದರಷ್ಟೇ ಅಲ್ಲ ಜಯಪ್ರಕಾಶರನ್ನು ತಮ್ಮ ತಮ್ಮನೆಂದೇ ನೆಹರು ಭಾವಿಸಿದ್ದರು. ಜಯಪ್ರಕಾಶರ ಪ್ರಕಾರ ಸಮಾಜವಾದವೆಂದರೆ ಶ್ರಮಿಕರಿಗೆ ಎಲ್ಲ ಅಧಿಕಾರವು ಹಸ್ತಾಂತರಗೊಳ್ಳಬೇಕೆಂಬುದೇ ಆಗಿತ್ತು. ಪ್ರಾರಂಭದ ದಿನಗಳಲ್ಲಿ ಗಾಂಧೀವಾದವನ್ನು ಕಟುವಾಗಿ ಟೀಕಿಸುವಷ್ಟರ ಮಟ್ಟಿಗೆ ಜಯಪ್ರಕಾಶರು ಮಾರ್ಕ್ಸ್‌ವಾದದಿಂದ ಪ್ರಭಾವಿತರಾಗಿದ್ದರು. ಆದರೆ ಕೆಲ ಕಾಲದ ನಂತರ ಅವರು ಗಾಂಧೀವಾದಕ್ಕೆ ಮರಳಿ ಬಂದರು. ಏಕೆಂದರೆ ಭಾರತವನ್ನು ಪುನರ್‌ನಿರ್ಮಾಣ ಮಾಡಲು ಮತ್ತು ಅಣುಯುದ್ಧದ ಅನಾಹುತದಿಂದ ವಿಶ್ವವನ್ನು ಸಂರಕ್ಷಿಸಲು ಗಾಂಧೀವಾದವೊಂದೇ ಮಾರ್ಗವೆಂದು ಜಯಪ್ರಕಾಶರಿಗನಿಸಿತು.

ಯುದ್ಧಕಾಲದ ಸಮಯದಲ್ಲಿ ಜಯಪ್ರಕಾಶರು ಕೈಗೊಂಡಿದ್ದ ಕಾರ್ಯ ಚಟುವಟಿಕೆಗಳ ಕಾರಣದಿಂದಾಗಿ ಅವರು ಭಾರತ ಸ್ವಾತಂತ್ರ್ಯ ಹೋರಾಟದ ನಾಯಕರಲ್ಲಿ ಮುಂಚೂಣಿ ನಾಯಕರಾಗಿ ಪ್ರಕಾಶಗೊಂಡರು ಮತ್ತು ಅವರು ಮಾಡಿದ ಮಹಾನ್ ತ್ಯಾಗವೂ ಕೂಡ ಬೆಳಕಿಗೆ ಬಂತು. ರಾಜಕಾರಣದಲ್ಲಿ ಮೌಲ್ಯಗಳು ಇರಬೇಕೆಂದೂ ಆಡಳಿತವು ವಿಕೇಂದ್ರಿಕೃತವಾಗಿರಬೇಕೆಂದೂ ಹೇಳುತ್ತಿದ್ದ ಗಾಂಧೀಯವರ ವಿಚಾರಗಳಿಗೆ ಜಯಪ್ರಕಾಶಕರು ಬದ್ಧರಾಗಿದ್ದರು. ಪ್ರಜಾಪ್ರಭುತ್ವದ ಬಗ್ಗೆ ಇದ್ದ ಜಯಪ್ರಕಾಶರ ಕಲ್ಪನೆಯಲ್ಲಿ ಪ್ರಜೆಯು ಬಂಡವಾಳಶಾಯಿಗಾಗಲೀ ಯಾವುದೇ ಪಕ್ಷಕ್ಕಾಗಲಿ, ಸರ್ಕಾರಕ್ಕಾಗಲಿ ದಾಸನಾಗಿರುವುದಿಲ್ಲ. ಅವನು ಸ್ವತಂತ್ರನಾಗಿರುತ್ತಾನೆ. ಸಾಧ್ಯವು ಸಾಧನಗಳನ್ನು ಸಮರ್ಥಿಸುತ್ತದೆ ಎಂಬ ಸಿದಾಂತವನ್ನು ಜಯಪ್ರಕಾಶರು ಎಂದೂ ಒಪ್ಪಲಿಲ್ಲ. ಹೊಸ ಸಮಾಜದ ರಚನೆಯ ಹೋರಾಟದಲ್ಲಿ ಮಾನವನ ಹಿತವೇ ಅತ್ಯಂತ ಮಹತ್ವದ್ದೆಂದು ಅವರು ಬಗೆದಿದ್ದರು. ಏಕೆಂದರೆ ಅವರ ಪ್ರಕಾರ ಸಾಧನಗಳು ಪವಿತ್ರವಾಗುವವರೆಗೆ ಸಮಾಜವು ಒಳ್ಳೆಯದಾಗಿರಲು ಸಾಧ್ಯವಿಲ್ಲ. ಸಮಾಜವನ್ನು ನಿರ್ಮಿಸುವ ಸಂದರ್ಭದಲ್ಲಿ ಅವರು ಐದು ಸಂಗತಿಗಳ ಮೇಲೆ ಒತ್ತು ಕೊಟ್ಟಿದ್ದರು:-

ಸಂಘಟನೆ. ಪ್ರಚಾರ, ಚಳುವಳಿ, ಹೋರಾಟ ಮತ್ತು ರಚನಾತ್ಮಕ ಕಾರ್ಯ.

ಸ್ಪರ್ಧಾತ್ಮಕ ರಾಜಕೀಯ ಪದ್ಧತಿಯ ಬದಲಿಗೆ ಸರ್ವಾನುಮತದ ರಾಜಕಾರಣ ಅಸ್ತಿತ್ವಕ್ಕೆ ಬರಬೇಕೆಂದು ಜಯಪ್ರಕಾಶ್ ಬಯಸಿದ್ದರು.

ಜಯಪ್ರಕಾಶರು ದೇಶದಲ್ಲಿ ಉದ್ಭವಿಸಿದ್ದ ಘಟನೆಗಳ ಬಗ್ಗೆ ತೀವ್ರತವು ಅಸಂತೋಷವನ್ನು ಬೆಳೆಸಿಕೊಂಡದ್ದರಿಂದ ದೇಶದ ಯುವಕರು ರಾಷ್ಟ್ರ ಕಾರ್ಯದಲ್ಲಿ ಮಹತ್ವದ ಪಾತ್ರ ವಹಿಸುವುದಕ್ಕಾಗಿ ಮುಂದೆ ಬರಬೇಕೆಂದು ೧೯೭೪ ರಲ್ಲಿ ಯುವಕರಿಗೆ ಕರೆಕೊಟ್ಟರು. ಅವರ ಆ ಕರೆಗೆ ಯುವಕರು ಸೂಕ್ತ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಚಿಕ್ಕದಾಗಿ ಪ್ರಾರಂಭದಾದ ಹೋರಾಟ ಕ್ರಮೇಣ ದೊಡ್ಡ ಚಳುವಳಿಯಾಗಿ ಮಾರ್ಪಟ್ಟಿತು. ಈ ಚಳುವಳಿಯ ಪರಿಣಾಮವಾಗಿ ಇಂದಿರಾಗಾಂಧೀಯವರ ಸರ್ಕಾರ ಬಿದ್ದುಹೋಯಿತು. ಬೇರೊಂದು ಸರ್ಕಾರ ಆ ಸ್ಥಾನಕ್ಕೆ ಬಂತು. ಜಯಪ್ರಕಾಶರ ಪ್ರೇರಣೆಯ ಮೇಲೆ ಜನತಾ ಪಕ್ಷದ ನಾಯಕರನ್ನೊಳಗೊಂಡ ಸರ್ಕಾರವು ಅಧಿಕಾರಕ್ಕೆನೋ ಬಂತು. ಆದರೆ ಈ ಹೊಸ ಸರ್ಕಾರ ಜಯಪ್ರಕಾಶರ ಯಾವೊಂದು ವಿಚಾರದ ಬಗ್ಗೆಯೂ ಆಸಕ್ತಿ ವಹಿಸಲಿಲ್ಲ. ಅಷ್ಟೇ ಅಲ್ಲ, ಯಾವುದೇ ಒಂದು ಮಹತ್ವದ ವಿಷಯಕ್ಕೆ ಸಂಬಂಧಿಸಿದಂತೆ ಜಯಪ್ರಕಾಶರ ಮಾರ್ಗದರ್ಶನ ಪಡೆಯಲಿಲ್ಲ. ಅಕ್ಟೋಬರ್ ೮ ೧೯೭೯ ರಂದು ಜಯಪ್ರಕಾಶರು ತೀರಿಕೊಂಡಿದ್ದರಿಂದ ಜನತಾ ಪಕ್ಷದ ವಿಘಟನೆಯನ್ನು ನೋಡಿ ಕ್ಲೇಷ ಪಡುವಂಥ ಪರಿಸ್ಥಿತಿ ತಪ್ಪಿತು!

ನಮ್ಮಲ್ಲಿಯ ಅನೇಕರು ಗಾಂಧೀಜಿ ರಾಷ್ಟ್ರೀಯ ಸ್ವಾತಂತ್ರ್ಯ ಆಂದೋಲನದ ನಾಯಕರಾಗಿದ್ದರೆಂದೂ ಮತ್ತು ಸತ್ಯ ಹಾಗೂ ಅಹಿಂಸೆಯ ಆಧಾರದ ಮೇಲೆ ಸತ್ಯಾಗ್ರಹ ತಂತ್ರವನ್ನು ಅಭಿವೃದ್ಧಿ ಪಡಿಸಿದರೆಂದೂ ತಿಳಿದಿದ್ದೇವೆ. ಗಾಂಧೀಜಿ ಭಾರತದ ಸಂತ ಪರಂಪರೆಯಲ್ಲಿ ಬಂದಂಥ ವ್ಯಕ್ತಿಯೆಂದು ಅನಿಸುತ್ತದೆ. ಆದರೆ ನೆಹರು ಇದಕ್ಕೆ ತದ್ವಿರುದ್ಧವಾದ ಮುಖ್ಯವಾಗಿ ಆಧುನಿಕ ವೈಜ್ಞಾನಿಕ ದೃಷ್ಟಿಕೋನವನ್ನು ಇಟ್ಟುಕೊಂಡಿದ್ದರು ಮತ್ತು ನಿಜಾರ್ಥದಲ್ಲಿ ಭಾರತವನ್ನು ಆಧುನಿಕ ದೇಶವನ್ನಾಗಿ ಮಾಡಬೇಕೆಂದು ಬಯಸಿದ್ದರು. ಈ ಉದ್ದೇಶಕ್ಕಾಗಿ ದೊಡ್ಡ ಪ್ರಮಾಣದಲ್ಲಿ ದೇಶದ ಕೈಗಾರೀಕರಣವಾಗಬೇಕೆಂದು ಮತ್ತು ಜೀವನದ ಎಲ್ಲ ಕ್ಷೇತ್ರಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಅಳವಡಿಸಿಕೊಳ್ಳಲ್ಪಡಬೇಕೆಂದು ಬಯಸಿದ್ದರು.

ಎಲ್ಲ ರಾಜಕಾರಣಗಳ ಆಕರ್ಷಣೆಯಾದ ಅಧಿಕಾರದಾಹದ ರಾಜಕೀಯಕ್ಷೇತ್ರದಿಂದ ಜಯಪ್ರಕಾಶರು ಹೊರಬಂದು ಜನಶಕ್ತಿಯನ್ನು ನಿರ್ಮಿಸುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಪ್ರಜಾಪ್ರತಿನಿಧಿಗಳು ಯಾವುದೇ ರಾಜಕೀಯ

ಹಿತಾಸಕ್ತಿಯಿಂದ ಬಂಧಿತರಾಗದೆ ಮತ್ತು ಯಾರು ತಮ್ಮನ್ನು ಅಧಿಕಾರದ ಕುರ್ಚಿಯ ಮೇಲೆ ಕೂಡಿಸಿದ್ದಾರೋ ಅಂಥವರನ್ನು ಮರೆಯದೆ ಹಾಗೂ ತಮ್ಮನ್ನು ಯಜಮಾನ ರೆಂದು ಭಾವಿಸದೆ ಜನಸೇವಕರೆಂದು ಭಾವಿಸಬೇಕಾಗಿ ಗಾಂಧೀಯವರು ಹೇಳಿ ದ್ದರು. ಗಾಂಧೀಯವರ ಅಮಾನುಷ ಹತ್ಯೆಯ ನಂತರ ಜಯಪ್ರಕಾಶರು ಈ ಗಾಂಧೀ ವಿಚಾರದೀಪ್ತಿಯನ್ನು ಮುನ್ನಡೆಸಿಕೊಂಡು ಬಂದರು. ಆರ್ಥಿಕ ಕ್ಷೇತ್ರಕ್ಕೆ ಸಂಬಂಧಿಸಿ ದಂತೆ ಗಾಂಧೀ, ನೆಹರು ಮತ್ತು ಜಯಪ್ರಕಾಶರ ವಿಚಾರಗಳು ಒಂದೇ ರೀತಿಯ ದಾಗಿದ್ದವು. ಬಡತನದ ನಿರ್ಮೂಲನೆ, ಶೋಷಣೆಯ ನಿರಾಕರಣೆಯನ್ನು ಮೂವರೂ ಒತ್ತಿ ಹೇಳಿದ್ದರು. ಅಲ್ಲದೆ ಜನರ ಆರ್ಥಿಕ ಅಭಿವೃದ್ಧಿಯೊಂದಿಗೆ ಅವರಲ್ಲಿ ರುವ ಮಾನವೀಯ ಗುಣಗಳು ಕೂಡ ಅಭಿವೃದ್ಧಿಯಾಗಬೇಕೆಂದು ಬಯಸಿದ್ದರು. ★

ಇಂಗ್ಲೀಷ್ 'ಗಾಂಧೀ ಮಾರ್ಗ' ಸಾಭಾರ

ಅನು : ಸು.ಕೌ

ಈ ಲೇಖನದಲ್ಲಿ ಇದುವರೆಗೆ ಗಾಂಧೀ, ನೆಹರೂ ಮತ್ತು ಜೆ.ಪಿ. ಈ ಮೂವರ ನಾಯಕರ ವ್ಯಕ್ತಿತ್ವದ ಪರಿಚಯ ಮಾಡಿಕೊಂಡೆವು ಮತ್ತು ಈ ಮೂವರೂ ದೇಶದ ಸ್ವಾತಂತ್ರ್ಯಕ್ಕಾಗಿ ಹಾಗೂ ನಂತರ ದೇಶದ ಅಭಿವೃದ್ಧಿಗಾಗಿ ಮಾಡಿದ ಚಿಂತನ ಕುರಿತೂ ತಿಳಿದುಕೊಂಡೆವು.

ವಿನೋಬಾ

ಈಗ ನಾವು ಇನ್ನೋರ್ವ ಹಿರಿಯ ಚೇತನ ಆಚಾರ್ಯ ವಿನೋಬಾ ಭಾವೆಯವರ ವ್ಯಕ್ತಿತ್ವ, ಅವರ ಚಿಂತನ ಮತ್ತು ಸ್ವತಂತ್ರ ಭಾರತದ ನಿರ್ಮಾಣ ಕಾರ್ಯದಲ್ಲಿ ಅವರ ಪಾತ್ರ, ಇತ್ಯಾದಿಗಳನ್ನು ಕುರಿತು ತಿಳಿದುಕೊಳ್ಳಬೇಕಾದುದು ಅಗತ್ಯ. ಏಕೆಂದರೆ ಗಾಂಧೀ, ನೆಹರೂ, ಜೆ.ಪಿ. ಮತ್ತು ವಿನೋಬಾ ಆಧುನಿಕ ಭಾರತೀಯ ಇತಿಹಾಸದ ಅವಿಭಾಜ್ಯ ಅಂಗವಾಗಿದ್ದಾರೆ ಈ ನಾಲ್ವರನ್ನು ಮರೆತು ಭಾರತದ ಪುನರ್ ನಿರ್ಮಾಣದ ರಚನೆಯ ವಿಚಾರವನ್ನು ಮಾಡು ವುದು ಸಾಧ್ಯವೇ ಇಲ್ಲ. ಹಾಗೇನಾದರೂ ಮಾಡಲು ಪ್ರಯತ್ನಿಸಿದಲ್ಲಿ ಭಾರತ ತನ್ನ ಅಸ್ಮಿತೆಯನ್ನು ಕಳೆದುಕೊಂಡ ದೇಶವಾಗಿ ರೂಪುಗೊಳ್ಳುವುದು; ಪ್ರಾಣ ತತ್ವವಿಲ್ಲದ ದೇಶವಾಗಿ ಬದುಕುವದು.

ಈ ನಾಲ್ವರಲ್ಲಿ ವಿನೋಬಾ ಪ್ರತ್ಯೇಕವಾಗಿ ಎದ್ದುಕಾಣುವ ವ್ಯಕ್ತಿಯಾಗಿದ್ದಾರೆ. ವಿನೋಬಾರಲ್ಲಿ ಗಾಂಧೀಯವರ ಆಧ್ಯಾತ್ಮಿಕ ಚಿಂತನೆಯೂ, ನೆಹರೂರ ಆಧುನಿಕ ದೃಷ್ಟಿಕೋನವೂ, ಜೆ. ಪಿ. ಯವರ ಕ್ರಾಂತದರ್ಶಿತ್ವವೂ ಹಿತಮಿತವಾಗಿ ಮೇಳೈಸಿಕೊಂಡಿದ್ದವು.

ಗಾಂಧೀಯವರ ಕಲ್ಪನೆಯಲ್ಲಿ ಭಾರತದ ಸ್ವಾತಂತ್ರ್ಯ ಕೇವಲ ರಾಜಕೀಯ

ಸ್ವಾತಂತ್ರ್ಯವಾಗಿರಲಿಲ್ಲ. ಅದು ಪೂರ್ಣಸ್ವರಾಜ್ಯದ ಕಲ್ಪನೆಯಾಗಿತ್ತು. ದೇಶದ ಪ್ರತಿಯೊಬ್ಬ ದುರ್ಬಲ ವ್ಯಕ್ತಿಯನ್ನೂ ಸಶಕ್ತನನ್ನಾಗಿ ಮಾಡುವ ಗುರಿಯನ್ನು ಹೊಂದಿತ್ತು. ಇಷ್ಟೇ ಅಲ್ಲ, ವಿಶ್ವದ ಎಲ್ಲ ದೇಶಗಳನ್ನು ಬಂಧಮುಕ್ತ ಮಾಡುವ ಉದ್ದೇಶ್ಯವನ್ನು ಹೊಂದಿತ್ತು. ಆದರೆ ಈ ಎಲ್ಲ ವಿಚಾರಗಳನ್ನು ಸಾಕಾರಗೊಳಿಸಲು ಗಾಂಧೀಯವರಿಗೆ ಸಾಧ್ಯವಾಗಲಿಲ್ಲ. ಅವರು ಜೀವಂತವಾಗಿದ್ದಾಗ ಅವರ ಬಹುಪಾಲು ಸಮಯವು ದೇಶದ ಸ್ವಾತಂತ್ರ್ಯ ಚಳುವಳಿಯ ನೇತೃತ್ವ ವಹಿಸುವುದರಲ್ಲಿಯೇ ಕಳೆದು ಹೋಯಿತು ಮತ್ತು ದೇಶಕ್ಕೆ ಸ್ವಾತಂತ್ರ್ಯ ಬಂದ ಕೂಡಲೆ ಅವರ ಕೊಲೆಯಾಯಿತು. ಹೀಗಾಗಿ ಗಾಂಧೀಯವರ ವಿಚಾರಗಳು ಸ್ವತಂತ್ರ ಭಾರತದ ಭೂಮಿಯಲ್ಲಿ ಬಿತ್ತಲ್ಪಡದೇ ಉಳಿದುಕೊಂಡವು. ೧೯೪೮ರಲ್ಲಿ ಗಾಂಧೀಜಿಯವರ ಹತ್ಯೆಯಾದನಂತರ ೧೯೪೮ ರಲ್ಲಿ ಸೇವಾಗ್ರಾಮದಲ್ಲಿ ಒಂದು ಸಭೆ ಸೇರಿತು. ಗಾಂಧೀ ವಿಚಾರದಲ್ಲಿ ನಂಬಿಕೆಯಿಟ್ಟಿದ್ದಂಥ ವ್ಯಕ್ತಿಗಳ ಸಭೆ ಆದಾಗಿತ್ತು. ಆ ಸಭೆಯಲ್ಲಿ ಗಾಂಧೀಯವರ ವಿಚಾರಗಳನ್ನು ಸ್ವತಂತ್ರ ಭಾರತದಲ್ಲಿ ಮುಂದುವರಿಸುವ ಬಗ್ಗೆ ಆಲೋಚನೆ ನಡೆಯಿತು. ಆ ಸಭೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದವರು ವಿನೋಬಾ. ಗಾಂಧೀಯವರ ಜೀವಿತ ಕಾಲದಲ್ಲಿ ವಿನೋಬಾ ಗಾಂಧಿಯವರ ಎಲ್ಲ ಬಗೆಯ ರಾಜಕಿಯ ಮತ್ತು ರಚನಾತ್ಮಕ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು ಗಾಂಧೀಯವರ ರಾಜಕೀಯ ವಿಚಾರಕ್ಕೆ ನೆಹರೂ ಉತ್ತರಾಧಿಕಾರಿಯಾಗಿದ್ದರೆ ಗಾಂಧೀಜಿಯವರ ಆಧ್ಯಾತ್ಮಿಕ ಹಾಗೂ ಸ್ವರಾಜ್ಯದ ವಿಚಾರಗಳಿಗೆ ವಿನೋಬಾ ಉತ್ತರಾಧಿಕಾರಿಯಾಗಿದ್ದರು. ಆದ್ದರಿಂದ ೧೯೪೮ನೇ ಇಸ್ವಿಯಲ್ಲಿ ಸೇವಾಗ್ರಾಮ ಆಶ್ರಮದಲ್ಲಿ ನಡೆದ ಗಾಂಧೀ ಅನುಯಾಯಿಗಳ ಸಮಾವೇಶದಲ್ಲಿ ಗಾಂಧೀಯವರ ವಿಚಾರವನ್ನು ಯಾವ ಹೆಸರಿನಲ್ಲಿ ಮುಂದುವರಿಸಬೇಕೆಂಬ ಬಗ್ಗೆ ಚರ್ಚೆ ನಡೆಯಿತು. ಅನೇಕ ಸಲಹೆಗಳು ಬಂದವು. ವಿನೋಬಾ ಆ ಸಭೆಯಲ್ಲಿ ಸೂಚಿಸಿದ ಹೆಸರು "**ಸರ್ವೋದಯ ಸಮಾಜ**" ಎಂದು. ಸೂಚಿಸಲ್ಪಟ್ಟ ಈ ಹೆಸರಿನಲ್ಲಿ "ಗಾಂಧೀ" ಎಂಬ ಶಬ್ದವೇ ಇಲ್ಲದಿರುವುದನ್ನು ನಾವು ಕಾಣಬಹುದು. ಗಾಂಧೀ ವಿಚಾರವನ್ನು ಗಾಂಧೀ ಎಂಬ ಶಬ್ದವಿಲ್ಲದೆ ಪ್ರಚಾರ ಮಾಡುವುದು ಸೂಕ್ತವಲ್ಲ; ಗಾಂಧೀ ಹೆಸರು ಇರಲೇಬೇಕೆಂಬುದು ಎಲ್ಲರ ಒತ್ತಾಸೆಯಾಗಿತ್ತು. ಆದರೆ ಈ ಬಗ್ಗೆ ವಿನೋಬಾರ ವಿಚಾರವೇ ಬೇರೆ ರೀತಿಯದಾಗಿತ್ತು, ಅದು ಅಪ್ಪಟ ಭಾರತೀಯ ಸಂಸ್ಕೃತಿಯ ಮೂಸೆಯಿಂದ ಬಂದುದಾಗಿತ್ತು. ಅವರ ಪ್ರಕಾರ ವ್ಯಕ್ತಿಯ ಹೆಸರಿಗೆ ಪ್ರಾಮುಖ್ಯತೆಯನ್ನು ಕೊಡುವುದು ಪಾಶ್ಚಿಮಾತ್ಯ ಸಂಸ್ಕೃತಿಯ ರೀತಿ. ಉದಾಹರಣೆಗೆ ಖಗೋಲದಲ್ಲಿ ಯಾವುದಾದರೊಂದು ಹೊಸ ನಕ್ಷತ್ರ ಅಥವಾ ಗ್ರಹ ಪತ್ತೆಯಾದರೆ ಆ ನಕ್ಷತ್ರಕ್ಕೆ ಕಂಡು ಹಿಡಿದ ವಿಜ್ಞಾನಿಯ ಹೆಸರನ್ನೇ ಕೊಡಲಾಗುತ್ತದೆ. ಭಾರತದ ಸಂಸ್ಕೃತಿ ಇದಲ್ಲ.

KA-SKMND-470/-2000, ಕರಡ-ಅಂಚೆ

Regd No. KAR/KAN/2000/3820

Vol 3 Issue 3.

Janapada Vichara - Kannada Monthly Digest Edited Printed and Published by Surendra Koulagi at Janapada Seva Trust Printing Press. Melkote on behalf of Janapada Seva Trust. (Regd) Melkote. Dist - Mandya 571 431.
Phone : 0823/648754